

## ಜನಪ್ರಿಯ ಶಾಸಕರ ಜನಪರ ಯೋಜನೆಗಳು



# ಸುಂದರ ಬೈಂದೂರು

## ಯೋಜನೆಗಳು ನೂರಾರು

**ಶ್ರೀ ಬಿ. ಎಂ. ಸುಕುಮಾರ ಶೆಟ್ಟಿ** ಶಾಸಕರು, ಬೈಂದೂರು ವಿಧಾನಸಭಾ ಕ್ಷೇತ್ರ

ಬೈಂದೂರಿನ ಅಭಿವೃದ್ಧಿಯ
**ಕನಸು-ನನಸು**

# ಅಂತರಾಳ

ಬೈಂದೂರು - ಒಂದು ಕಡೆ ಅರಬ್ಬೀ ಸಮುದ್ರ, ಇನ್ನೊಂದು ಕಡೆ ಪಶ್ಚಿಮ ಘಟ್ಟಗಳ ಮಧ್ಯದಲ್ಲಿರುವ ವಿಶಾಲವಾದ ವಿಧಾನಸಭಾ ಕ್ಷೇತ್ರ. ಹಿಂದಿನಿಂದಲೂ ಬೈಂದೂರು ಹಿಂದುಳಿದ ಮತ ಕ್ಷೇತ್ರ ಎಂಬ ಹಣೆಪಟ್ಟಿ ಹೊತ್ತಿರುವ ಕ್ಷೇತ್ರವಾಗಿದೆ. ಬೈಂದೂರಿನ ಅಭಿವೃದ್ಧಿ ಎಂಬ ಕನಸು ಹೊತ್ತು ಆ ಕನಸನ್ನು ನನಸಾಗಿಸಬೇಕೆಂಬ ಛಲ ಹೊತ್ತ ನನಗೆ ತಾವೆಲ್ಲರೂ ಮತ ನೀಡಿ ಶಾಸಕನನ್ನಾಗಿ ಆಯ್ಕೆ ಮಾಡಿದ್ದೀರಿ. ಕಳೆದ ಐದು ವರ್ಷಗಳಲ್ಲಿ ನಾನು ನಿಮಗೆ ನೀಡಿದ ಅಭಿವೃದ್ಧಿಯ ಭರವಸೆಗಳನ್ನು ಈಡೇರಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ. ಬೈಂದೂರು ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿತವಾಗಲು ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ. ಎಸ್. ಯಡಿಯೂರಪ್ಪನವರು, ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿಯವರು, ಸಂಸದರಾದ ಸನ್ಮಾನ್ಯ ಶ್ರೀ ಬಿ. ವೈ. ರಾಘವೇಂದ್ರ ಅವರು ಹೆಚ್ಚಿನ ಮುತುವರ್ಜಿಯಿಂದ ಸಹಕಾರ ನೀಡಿದ್ದಾರೆ. ಅವರೊಡನೆ ಎಲ್ಲ ಸಚಿವರು, ಸ್ಥಳೀಯ ಜನಪ್ರತಿನಿಧಿಗಳು ಅಭಿವೃದ್ಧಿಯ ವೇಗ ಹೆಚ್ಚಾಗಲು ನನಗೆ ಸಹಕಾರ ನೀಡಿದ್ದಾರೆ. ಇವರೆಲ್ಲರ ಸಹಕಾರದಿಂದ ಬೈಂದೂರಿನ ಇತಿಹಾಸದಲ್ಲೇ ಮೊದಲ ಬಾರಿಗೆ ಅತೀ ಹೆಚ್ಚು ಎಂದರೆ 3,000 ಕೋಟಿ ರೂಪಾಯಿಗೂ ಮಿಕ್ಕಿದ ಅನುದಾನವನ್ನು ಕ್ಷೇತ್ರಕ್ಕೆ ತಂದ ಸಮಾಧಾನ, ಸಂತಸ ನನ್ನದು. ಹಿಂದುಳಿದ ಕ್ಷೇತ್ರ ಎಂಬ ಹಣೆಪಟ್ಟಿಯನ್ನು ಕಳಚುವುದಾಗಿ ಆಶ್ವಾಸನೆ ನೀಡಿ ನಿಮ್ಮಿಂದ ಆಯ್ಕೆಯಾದ ನಾನು ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಗಳನ್ನು ಒಂದೊಂದಾಗಿ ಪೂರೈಸುತ್ತಾ, ಅವುಗಳ ಅನುಷ್ಠಾನಕ್ಕೆ ಶ್ರಮಿಸಿದ್ದೇನೆ, ಯಶಸ್ವಿಯೂ ಆಗಿದ್ದೇನೆ ಎನ್ನುವ ಆತ್ಮತೃಪ್ತಿಯಿದೆ. ಭಾರತವನ್ನು ವಿಶ್ವಗುರುವಾಗಿಸಬೇಕೆಂಬ ಸಂಕಲ್ಪ ತೊಟ್ಟು ಅವಿರತವಾಗಿ ಸಂತರಂತೆ ಶ್ರಮಿಸುತ್ತಿರುವ ರಾಷ್ಟ್ರನಾಯಕ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರ ಮಾರ್ಗದರ್ಶನ, ರಾಜ್ಯ ಸರ್ಕಾರದ ಸಹಕಾರದಿಂದ ನಮ್ಮ ಬೈಂದೂರು ವಿಧಾನಸಭಾ ಕ್ಷೇತ್ರ ನವ ಬೈಂದೂರು ಆಗಿ ವಿಕಸಿಸುತ್ತಿದೆ. ಆದಿ ಪರಾಶಕ್ತಿ ಕೊಲ್ಲೂರು ಮೂಕಾಂಬಿಕಾ ದೇವಿ ನನ್ನ ಆರಾಧ್ಯ ದೇವತೆ, ನನ್ನ ಶಕ್ತಿ, ಸ್ಫೂರ್ತಿ. 'ಮೂಕಾಂಬಾಂ ಸಕಲೇಷ್ಟಸಿದ್ಧಿಫಲದಾಂ ವಂದೇ ಪರಾಂ ದೇವತಾಂ' ಎಂಬ ಮಾತಿನಂತೆ ಬೈಂದೂರಿನ ಅಭಿವೃದ್ಧಿಯ ಕುರಿತಾಗಿ ಆ ತಾಯಿ ಸಕಲ ಇಷ್ಟಗಳೂ ಸಿದ್ಧಿಯಾಗಲೆಂದು ಹರಸಿದ ಪರಿಣಾಮವಾಗಿ ಕ್ಷೇತ್ರದಲ್ಲಿ ಹಿಂದೆಂದೂ ಕಾಣದ ಅಭಿವೃದ್ಧಿ ಸಾಧಿತವಾಗಿದೆ. ಕುಡಿಯುವ ನೀರಿನ ಯೋಜನೆ, ಏತ ನೀರಾವರಿ, ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಕಿಂಡಿ ಅಣೆಕಟ್ಟು, ಸುಸಜ್ಜಿತ ಗ್ರಾಮೀಣ ರಸ್ತೆಗಳು, ಸೇತುವೆಗಳು, ಸಮುದಾಯ ಭವನಗಳ ನಿರ್ಮಾಣ, ದೇವಾಲಯಗಳ ಅಭಿವೃದ್ಧಿ, ಮೀನುಗಾರಿಕೆ ಮತ್ತು ಮೀನುಗಾರರ ಅಭಿವೃದ್ಧಿ, ಶಿಕ್ಷಣ, ವಸತಿ, ತಾಲೂಕು ಕೇಂದ್ರದ ಉನ್ನತೀಕರಣ, ವಿದ್ಯುತ್ ಪೂರೈಕೆ, ಪ್ರವಾಸೋದ್ಯಮ ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲೂ ಅಪಾರ ಅಭಿವೃದ್ಧಿ ಸಾಧಿತವಾಗಿದೆ. ಇದರ ಹಿಂದೆ ಪ್ರಾಮಾಣಿಕ ಪ್ರಯತ್ನ ಒದಗಿಸಿದ ಸಂತೃಪ್ತಿಯಿದೆ. ನೀವು ನನ್ನ ಮೇಲಿಟ್ಟಿರುವ ವಿಶ್ವಾಸವನ್ನು ಉಳಿಸಿಕೊಂಡಿದ್ದೇನೆಂಬ ಭಾವನೆಯೊಂದಿಗೆ ಮುಂದಿನ ದಿನಗಳಲ್ಲಿ ಬೈಂದೂರು ರಾಜ್ಯದಲ್ಲೇ ಮಾದರಿ ಕ್ಷೇತ್ರವಾಗಲು ನಿಮ್ಮ ಸಹಕಾರ, ಆಶೀರ್ವಾದ ಇರಲಿ ಎಂದು ವಿನಮ್ರವಾಗಿ ವಿನಂತಿಸುತ್ತೇನೆ.

ನಿಮ್ಮವ

**[ಬಿ.ಎಂ.ಸುಕುಮಾರ ಶೆಟ್ಟಿ]**










# ಕ್ಷೇತ್ರ ಪರಿಚಯ

ಬೈಂದೂರು ಉಡುಪಿ ಜಿಲ್ಲೆಯ ವಿಶಾಲವಾದ ವಿಧಾನಸಭಾ ಕ್ಷೇತ್ರಗಳಲ್ಲಿ ಒಂದಾಗಿದೆ. ಬೈಂದೂರಿನ ಒಂದು ಬದಿಯಲ್ಲಿ ಎತ್ತರವಾದ ಪಶ್ಚಿಮ ಘಟ್ಟಗಳಿದ್ದರೆ, ಇನ್ನೊಂದು ಬದಿಯಲ್ಲಿ ಭೋರ್ಗರೆಯುವ ಅರಬ್ಬೀ ಸಮುದ್ರವಿದೆ. ಈ ಎರಡರ ಮಧ್ಯದ ವಿಶಾಲ ಭೂಪ್ರದೇಶದಲ್ಲಿರುವುದು ಬೈಂದೂರು.

ಬೈಂದೂರು ವಿಧಾನಸಭಾ ಕ್ಷೇತ್ರ 246 ಬೂತ್‌ಗಳು, 40 ಗ್ರಾಮ ಪಂಚಾಯತ್‌ಗಳು ಮತ್ತು 1 ಪಟ್ಟಣ ಪಂಚಾಯತಿಯನ್ನು ಹೊಂದಿದೆ. ಇಷ್ಟು ವಿಶಾಲವಾದ ಕ್ಷೇತ್ರ ಹಿಂದಿನಿಂದಲೂ ಹಿಂದುಳಿದ ಕ್ಷೇತ್ರವಾಗಿಯೇ ಉಳಿದಿತ್ತು.

ಅಭಿವೃದ್ಧಿ ಒಂದು ರೀತಿ ಬೈಂದೂರಿಗೆ ಮರೀಚಿಕೆಯಾಗಿತ್ತು. ಬೈಂದೂರು ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಪಣತೊಟ್ಟು ಚುನಾವಣೆಯಲ್ಲಿ ಆಯ್ಕೆಯಾದ ಬಳಿಕ ಈ ನಿಟ್ಟಿನಲ್ಲಿ ಸಾಕಷ್ಟು ಶ್ರಮವಹಿಸಲಾಗಿದೆ. ಬೈಂದೂರಿಗೆ ಬಹುಕೋಟಿ ಅನುದಾನವನ್ನು ತಂದು, ಆ ಅನುದಾನವನ್ನು ಎಲ್ಲ ಬೂತ್‌ಗಳಲ್ಲೂ, ಎಲ್ಲ ಗ್ರಾಮಗಳಲ್ಲೂ ಅಭಿವೃದ್ಧಿ ಕಾಮಗಾರಿ ನಡೆಸಲು ವಿನಿಯೋಗಿಸಲಾಗಿದೆ. ಆದರೆ ವಿಶಾಲವಾದ ಈ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಈ ಮೊತ್ತವೂ ಕಡಿಮೆಯಾಗುತ್ತದೆ.

ಪ್ರತಿಯೊಂದು ಗ್ರಾಮದಲ್ಲೂ ಒಂದಲ್ಲ ಒಂದು ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ, ಹಲವು ಯೋಜನೆಗಳು ಚಾಲ್ತಿಯಲ್ಲಿವೆ.

ಬೈಂದೂರಿನ ಅಭಿವೃದ್ಧಿಗೆ ಹಿಂದೆಂದೂ ಇಲ್ಲದ ವೇಗ ಈ ಅವಧಿಯಲ್ಲಿ ನೀಡಲಾಗಿದೆ. ಮುಂದಿನ ಅವಧಿಯಲ್ಲೂ ಬಿಜೆಪಿಗೆ ಮತ್ತೊಂದು ಅವಕಾಶ ನೀಡಿ, ಜನತೆ ಆಶೀರ್ವದಿಸಿ ಬೈಂದೂರಿನ ಅಭಿವೃದ್ಧಿ ಇನ್ನೂ ಸಾಧಿತವಾಗುವಂತೆ ಮಾಡಬೇಕಿದೆ.

**ಜಲೋತ್ಸವ**
ಮನೆ ಮನೆಗೆ ಗಂಗೆ

**ಉಡುಪಿ ಜಿಲ್ಲೆಯ ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಬೇಸಗೆಯಲ್ಲಿ ಸಮುದ್ರದ ಉಪ್ಪು ನೀರಿನಿಂದಾಗಿ ಕುಡಿಯುವ ನೀರಿನ ಸಮಸ್ಯೆ ಗರಿಷ್ಠವಾಗಿದ್ದು, ಚುನಾವಣೆಯ ಸಂದರ್ಭದಲ್ಲಿ ಈ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಕ್ಷೇತ್ರದ ಪ್ರತಿಯೊಂದು ಮನೆಗೆ ಕುಡಿಯುವ ನೀರು ಪೂರೈಸುವುದಾಗಿ ನಾವು ಭರವಸೆ ನೀಡಿದ್ದೆವು.**
**ಆ ಭರವಸೆಯನ್ನು ಈಡೇರಿಸುವ ಹೆಜ್ಜೆ ಇಟ್ಟಿದ್ದು, ನಬಾರ್ಡ್ ಯೋಜನೆಯಡಿ 784.60 ಕೋಟಿ ರೂಪಾಯಿ ವೆಚ್ಚದ ಶುದ್ಧ ಕುಡಿಯುವ ನೀರಿನ ಯೋಜನೆ ಸಾಕಾರಗೊಳ್ಳಲಿದೆ.**




**784.60 ಕೋಟಿ**

## ಮನೆ ಮನೆಗೆ ಗಂಗೆ

# ಕುಡಿಯುವ ನೀರಿನ ಸಮಸ್ಯೆಗೆ ಇತಿಶ್ರೀ ಹಾಡಿದ ಬಿಜೆಪಿ ಸರ್ಕಾರ

ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಪಶ್ಚಿಮದ ಅರಬ್ಬಿ ಸಮುದ್ರ ಸೇರುವ ದೊಡ್ಡ ನದಿಗಳು ಬೈಂದೂರು ಕ್ಷೇತ್ರದಲ್ಲಿ ಹರಿಯುತ್ತವೆ. ಆದರೂ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ಯಾವಾಗಲೂ ಸಮಸ್ಯೆ. ಟ್ಯಾಂಕರ್ ಮೂಲಕ ನೀರಿನ ಪೂರೈಕೆ ಮಾಡಲಾಗುತ್ತಿದ್ದರೂ, ಅದು ಸಮರ್ಪಕ ಪರಿಹಾರವಾಗಿರಲಿಲ್ಲ. ಸಮಗ್ರ ಬೈಂದೂರು ಕ್ಷೇತ್ರದಲ್ಲಿ ಎಲ್ಲಿಯೂ ಕುಡಿಯುವ ನೀರಿಗಾಗಿ ಪರದಾಟ ಇರಬಾರದು ಎಂದು ಶಾಸಕ ಸುಕುಮಾರ ಶೆಟ್ಟರ ಮನವಿಯ ಮೇರೆಗೆ, ಮಾನ್ಯ ಸಂಸದರಾದ ಬಿ ವೈ ರಾಘವೇಂದ್ರ ಅವರ ಸಹಕಾರದೊಂದಿಗೆ ಬೃಹತ್ ಯೋಜನೆಯನ್ನು ಜಾರಿಗೆ ತರಲಾಗಿದೆ.

ವಾರಾಹಿ ನದಿ ಮೂಲದಿಂದ ಪ್ರತಿ ಮನೆಗೆ ಕುಡಿಯುವ ನೀರು ತಲುಪಿಸುವ ಯೋಜನೆಗೆ ಅನುದಾನ ಮಂಜೂರು ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇಡೀ ಬೈಂದೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಲ್ಲಿಯೂ ಕುಡಿಯುವ ನೀರಿಗೆ ತೊಂದರೆ ಆಗದಂತೆ ಯೋಜನೆಯ ಕೆಲಸ ಆರಂಭಗೊಂಡಿದೆ.




# 3 ಲಕ್ಷ ಜನರ ಮನೆಗೆ ಜೀವ ಜಲ

ಬೈಂದೂರು ಕ್ಷೇತ್ರದ 40 ಗ್ರಾಮ ಪಂಚಾಯತಿಗಳು ಹಾಗೂ ಪಟ್ಟಣ ಪಂಚಾಯತಿ ಸೇರಿದಂತೆ 848 ಜನ ವಸತಿ ಪ್ರದೇಶಗಳ 3 ಲಕ್ಷ ಜನರ ಮನೆ ಬಾಗಿಲಿಗೆ ಜೀವ ಜಲ ತಲುಪಿಸುವ ಯೋಜನೆ ಇದಾಗಿದೆ. ಕ್ಲಸ್ಟರ್ - 1 (ಪರ್ವತ ಶ್ರೇಣಿ) ಹಾಗೂ ಕ್ಲಸ್ಟರ್ - 2 (ಸಮುದ್ರ ತೀರ ಪ್ರದೇಶ) ಗಳ ವ್ಯಾಪ್ತಿಯಲ್ಲಿ ಕ್ರಮವಾಗಿ ಹೊಸಂಗಡಿ ಹಾಗೂ ಗುಲ್ವಾಡಿಯಲ್ಲಿ ನೀರನ್ನು ಶುದ್ಧೀಕರಿಸಿ, ಪ್ರತಿ ಮನೆಗೆ ಪೂರೈಸಲಾಗುತ್ತದೆ.

**ಬೈಂದೂರಿನ ಕುಡಿಯುವ ನೀರಿನ ಕಷ್ಟಕ್ಕೆ ಸ್ಪಂದಿಸಿದ ಸುಕುಮಾರ ಶೆಟ್ಟರನ್ನು ಬೈಂದೂರಿಗೆ ಕುಡಿಯುವ ನೀರು ತಂದ ಭಗೀರಥ ಎಂದೇ ಜನರು ಶ್ಲಾಘಿಸುತ್ತಿದ್ದಾರೆ.**







# ಕೃಷಿಗೆ ಮರುಜನ್ಮ ನೀಡಿದ ಏತ ನೀರಾವರಿ

**ಕೃಷಿಯಲ್ಲಿ ಕ್ರಾಂತಿಕಾರಿ ಬದಲಾವಣೆ ತಂದ ಏತ ನೀರಾವರಿ**

ಮಳೆಗಾಲವನ್ನು ಅವಲಂಬಿಸಿ ಕೃಷಿ ಚಟುವಟಿಕೆ ನಡೆಸುತ್ತಿದ್ದ ಬೈಂದೂರು ಕ್ಷೇತ್ರದ ರೈತರಿಗೆ ಮಳೆಗಾಲವನ್ನು ಹೊರತುಪಡಿಸಿ ಉಳಿದ ಸಂದರ್ಭಗಳಲ್ಲಿ ಕೃಷಿ ಚಟುವಟಿಕೆ ನಡೆಸುವುದು ಸವಾಲಾಗಿತ್ತು. ಸರ್ವ ಋತು ಕೃಷಿಗೆ ನೀರಿನ ಅಭಾವವಿತ್ತು. ರೈತರು ಎದುರಿಸುತ್ತಿದ್ದ ಈ ಗಂಭೀರ ಸಮಸ್ಯೆಯನ್ನು ಗಮನಿಸಿದ ಮಾನ್ಯ ಶಾಸಕರಾದ ಸುಕುಮಾರ ಶೆಟ್ಟರು ಸರ್ಕಾರದ ಗಮನಕ್ಕೆ ತಂದರು. ಸರ್ಕಾರ ಮೂರು ಭಾಗಗಳಲ್ಲಿ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಿ ರೈತರ ಬೇಡಿಕೆಯನ್ನು ಈಡೇರಿಸಿದೆ. ಸೌಕೂರು ಏತ ನೀರಾವರಿ ಕಾಮಗಾರಿ ಸಂಪೂರ್ಣಗೊಂಡು ರೈತರಿಗೆ ಸರ್ವ ಋತು ಕೃಷಿ ಚಟುವಟಿಕೆಗೆ ಅನುವು ಮಾಡಿಕೊಟ್ಟಿದೆ. ಗುಡೆ ಮಹಾಲಿಂಗೇಶ್ವರ ಹಾಗೂ ಸಿದ್ದಾಪುರ ಏತ ನೀರಾವರಿ ಕಾಮಗಾರಿ ಪ್ರಗತಿಯಲ್ಲಿದ್ದು, ಅನ್ನದಾತ ರೈತರಿಗೆ ಸರ್ವ ಋತು ಕೃಷಿಗೆ ನೀರನ್ನು ಒದಗಿಸಲು ಮುನ್ನುಡಿ ಬರೆಯುತ್ತಿದೆ. ಏತ ನೀರಾವರಿ ಯೋಜನೆ ಜಾರಿಗೆ ಬಂದ ಬಳಿಕ ಬೈಂದೂರು ಕ್ಷೇತ್ರದಲ್ಲಿ ಅಂತರ್ಜಲ ಮಟ್ಟವು ಸಾಕಷ್ಟು ಏರಿಕೆಯಾಗಿದೆ.

ನಮ್ಮ ಬೈಂದೂರು ಕ್ಷೇತ್ರದಲ್ಲಿ ಸಾಕಷ್ಟು ಮಳೆಯಾಗುತ್ತಿತ್ತು. ಮೊದಲೆಲ್ಲ ನಾವು ಕೊಳ್ಕಿ, ಸುಗ್ಗಿ ಮತ್ತು ಕಾತಿ ಎಂಬ ಮೂರು ಬೆಳೆ ಬೇಸಾಯ ಮಾಡುತ್ತಿದ್ದೆವು. ಆದರೆ ನೀರಾವರಿಯ ಕೊರತೆಯಿಂದ ಬೈಂದೂರಿನಲ್ಲಿ ಕೇವಲ ಮಳೆಗಾಲದಲ್ಲಿ ಮಾತ್ರ ಕೃಷಿ ಮಾಡುವಂತಾಗಿತ್ತು. ಈ ಸಮಸ್ಯೆಯನ್ನು ಮಾನ್ಯ ಶಾಸಕರಾದ ಸುಕುಮಾರ ಶೆಟ್ಟರ ಗಮನಕ್ಕೆ ತಂದಾಗ ಅವರು ಏತ ನೀರಾವರಿ ಯೋಜನೆಯನ್ನು ಅನುಷ್ಠಾನಕ್ಕೆ ತಂದರು. ಇದರ ಪರಿಣಾಮವಾಗಿ ಬೈಂದೂರು ಕ್ಷೇತ್ರದ ಕೃಷಿಕರು ಈಗ ಕೊಳ್ಕಿ, ಸುಗ್ಗಿ ಮತ್ತು ಕಾತಿ ಮೂರೂ ಬೇಸಾಯವನ್ನು ಮಾಡುತ್ತಿದ್ದಾರೆ

**ರವಿ ಗಾಣಿಗ ಕೆಂಚನೂರು**
**ಗ್ರಾಮ ಪಂಚಾಯತ್ ಸದಸ್ಯರು**



**311.21 ಕೋಟಿ**

**ರೈತರ ಸಮಗ್ರ ಕಲ್ಯಾಣವೇ ಬಿಜೆಪಿಯ ಗುರಿಯಾಗಿದೆ.**

 

# ಏತ ನೀರಾವರಿ

| ಯೋಜನೆಯ ಹೆಸರು | ಮೊತ್ತ ವಿವರ (ಕೋಟಿ) | ಯೋಜನೆಯ ವಿವರ |
|---|---|---|
| ಸೌಕೂರು ಏತ ನೀರಾವರಿ | 73.71 | 1350 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ. ಸೌಕೂರು, ಕರ್ಕುಂಜೆ, ಕೆಂಚನೂರು, ದೇವಲ್ಕುಂದ, ಕನ್ಯಾನ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಪ್ರಯೋಜನಕಾರಿ. |
| ಸಿದ್ದಾಪುರ ಏತ ನೀರಾವರಿ | 165.50 | ವರಾಹಿ ಬಲದಂಡೆ ಹಾದುಹೋಗುವ ಅಚ್ಚುಕಟ್ಟು ಪ್ರದೇಶದ 1200 ಹೆಕ್ಟೇರ್ ಪ್ರದೇಶಗಳಿಗೆ ನೀರು ಒದಗಿಸುವ ಸಿದ್ದಾಪುರ ಏತ ನೀರಾವರಿ ಯೋಜನೆಗೆ 165 ಕೋಟಿ ರೂ ಮಂಜೂರಾಗಿದೆ. ಹೊಳೆ ಶಂಕರನಾರಾಯಣ ಬಳಿ ವಾರಾಹಿ ನದಿಯಿಂದ ಸುಮಾರು 53.67 ಕ್ಯೂಸೆಕ್ಸ್ ನೀರನ್ನು ಮೇಲಕೆತ್ತಿ, ಸಿದ್ದಾಪುರ, ಆಜ್ರಿ, ಕೊಡ್ಲಾಡಿ, ಹೊಸಂಗಡಿ, ಕರ್ಕುಂಜೆ, ಆಸು ಪಾಸಿನ 1,200 ಹೆಕ್ಟೇರ್ ಭೂ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆ ಇದಾಗಿದೆ. ಈ ಯೋಜನೆಗೆ 0.54 ಟಿಎಂಸಿ ನೀರಿನ ಅವಶ್ಯಕತೆ ಇದೆ. |
| ಗುಡೆ ಮಹಾಲಿಂಗೇಶ್ವರ ಏತ ನೀರಾವರಿ | 72.00 | ಎಡಮಾವಿನ ಹೊಳೆಯಿಂದ ನೀರನ್ನು ಪಂಪ್ ಮೂಲಕ ಎತ್ತಿ ಕಂಬದಕೋಣೆ, ಹೆರಂಜಾಲು, ಕಿರಿಮಂಜೇಶ್ವರ, ನಾವುಂದ, ಕಾಲ್ತೋಡು ಗ್ರಾಮಗಳ ಸುಮಾರು 450 ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಹಾಗೂ ಹಾಳಿ ಇರುವ ಕಿಂಡಿ ಅಣೆಕಟ್ಟುಗಳ ಪುನಶ್ಚೇತನ ಮತ್ತು ಕೆರೆಗಳನ್ನು ತುಂಬಿಸುವ 72 ಕೋಟಿ ರೂಪಾಯಿಗಳ ಯೋಜನೆ. |




# ಸಂಪರ್ಕ ಕ್ರಾಂತಿ

ಬೈಂದೂರು ಕ್ಷೇತ್ರದಲ್ಲಿ ಸಂಪರ್ಕ ವ್ಯವಸ್ಥೆ ಅತ್ಯಂತ ಕೆಳಮಟ್ಟದ್ದಾಗಿತ್ತು. ಓಡಾಡಲು ಸಮರ್ಪಕವಾದ ರಸ್ತೆ ಇಲ್ಲದೆ ಕಲ್ಲು ಮುಳ್ಳಿನ ಹಾದಿಯಲ್ಲಿ ಸಾಗಬೇಕಾಗಿತ್ತು.

ಆದರೆ ಇವತ್ತು ಬೈಂದೂರಿನಾದ್ಯಂತ ಸೇತುವೆಗಳು, ಗ್ರಾಮೀಣ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು, ಅವುಗಳ ಜೊತೆಗೆ ಸೇತುವೆ ಸಹಿತ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸಿ, ಜನರಿಗೆ ಅನುಕೂಲ ಕಲ್ಪಿಸಲಾಗಿದೆ. ಗ್ರಾಮೀಣ ಪ್ರದೇಶದ ಜನರಿಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಶಾಸಕರು, ಸಂಸದರು ಹಾಗೂ ರಾಜ್ಯ ಸರ್ಕಾರ ಅಭೂತಪೂರ್ವ ಕಾರ್ಯಗಳನ್ನು ಮಾಡಿದ್ದಾರೆ.

ಪಶ್ಚಿಮ ಘಟ್ಟದ ಬೆಟ್ಟ ಗುಡ್ಡಗಳು ಮತ್ತು ನದಿಗಳಿಂದ ಆವೃತವಾದ ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಮಕ್ಕಳು ಶಾಲೆಗೆ ಹೋಗಲು, ಜನರು ಆಸ್ಪತ್ರೆಗಳಿಗೆ ತೆರಳಲು, ಪಟ್ಟಣಕ್ಕೆ ಸಂಪರ್ಕ ಕಲ್ಪಿಸಲು ನದಿ ದಾಟುವುದಕ್ಕಾಗಿ ಮರದ ಹಲಗೆಗಳಿಂದ ಮಾಡಿದ ಅಪಾಯಕಾರಿ ಸಂಕವನ್ನು ದಾಟಿ ಓಡಾಡಬೇಕಾಗಿತ್ತು. ಇಂತಹ ಅಪಾಯಕಾರಿ ಸನ್ನಿವೇಶದಲ್ಲಿ ಅಂಗನವಾಡಿ ಮತ್ತು ಪ್ರಾಥಮಿಕ ಶಾಲಾ ಮಕ್ಕಳು ಮಳೆಗಾಲದಲ್ಲಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸಿದ್ದಾರೆ. ಇದನ್ನೆಲ್ಲ ಮನಗಂಡ ಸುಕುಮಾರ ಶೆಟ್ಟಿಯವರ ಪ್ರಯತ್ನದ ಫಲವಾಗಿ, ಅನೇಕ ಸೇತುವೆಗಳು, ಗ್ರಾಮೀಣ ಪ್ರದೇಶಗಳಿಗೆ ಸಂಪರ್ಕ ರಸ್ತೆಗಳ ನಿರ್ಮಾಣವಾಗಿದ್ದು, ಜನರಿಗೆ ಅನುಕೂಲವಾಗಿದೆ.

## ವೇಗ ಪಡೆದಿದೆ ಸಂಪರ್ಕ ಸೇತುವೆಗಳ ನಿರ್ಮಾಣ

ಸಿದ್ದಾಪುರ, ಸೌಡ, ಶಂಕರನಾರಾಯಣ ಭಾಗದ ಜನರ ಬಹುಕಾಲದ ಬೇಡಿಕೆಯಾಗಿದ್ದ ಸೌಡ - ಶಂಕರನಾರಾಯಣ ಸೇತುವೆಗೆ ಶಾಸಕರ ಪ್ರಯತ್ನದಿಂದ 15.48 ಕೋಟಿ ರೂಪಾಯಿ ಮಂಜೂರಾಗಿದೆ. ಈ ಸೇತುವೆ ಪೂರ್ಣಗೊಂಡರೆ ಕರಾವಳಿಯಿಂದ ಮಲೆನಾಡಿಗೆ ಮತ್ತೊಂದು ರಸ್ತೆ ನಿರ್ಮಾಣವಾಗುವುದು ಮಾತ್ರವಲ್ಲದೆ, ಸಾವಿರಾರು ಜನರಿಗೆ ಸಹಾಯವಾಗಲಿದೆ. ಅತೀ ಕುಗ್ರಾಮವಾದ ಹಳ್ಳಿಹೊಳೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಹಳ್ಳಿಹೊಳೆ - ಕಬ್ಬಿನಾಲೆ ಸಂಪರ್ಕ ಕಲ್ಪಿಸುವ 3.48 ಕೋಟಿ ರೂಪಾಯಿ ವೆಚ್ಚದ ಹಳ್ಳಿಹೊಳೆ - ಕಬ್ಬಿನಾಲೆ ಸೇತುವೆ ನಿರ್ಮಾಣ.



### ಕಾಲುಸಂಕಗಳ ನಿರ್ಮಾಣ

ಗ್ರಾಮೀಣ ಭಾಗದ ಶಾಲಾ ಮಕ್ಕಳಿಗೆ ಹಾಗೂ ರೈತರಿಗೆ ಕೃಷಿ ಚಟುವಟಿಕೆ ಅನುಕೂಲವಾಗುವಂತೆ ಕ್ಷೇತ್ರದಾದ್ಯಂತ ಈಗಾಗಲೇ ಲೋಕೋಪಯೋಗಿ ಇಲಾಖೆಯಿಂದ 15 ಕೋಟಿ ರೂಪಾಯಿ ವೆಚ್ಚದಲ್ಲಿ 182 ಕಾಲುಸಂಕಗಳ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಲಾಗಿದೆ.

# ಸಂಪರ್ಕ ಸೇತುವೆಗಳೆಡೆಗೊಂದು ನೋಟ

## 1. ಬೈಂದೂರು

ಬೈಂದೂರು ತಾಲೂಕು ಏಳಜಿತ ಗ್ರಾಮದ
ಶಾಂತೇರಿ ರಸ್ತೆ ಹಾಗೂ ಸೇತುವೆ ಅಭಿವೃದ್ಧಿ

## 2. ಬೈಂದೂರು

ಯಡಮೊಗೆ ಗ್ರಾಮದ ಹೊಸಬಾಳು
ಎಂಬಲ್ಲಿ ಸೇತುವೆ ಮತ್ತು ರಸ್ತೆ ನಿರ್ಮಾಣ

## 3. ಬೈಂದೂರು

ಬೆಳ್ಳಾಲ ಗ್ರಾಮ ಪಂಚಾಯತ್ ವ್ಯಾಪ್ತಿಯ
ಮೂಡುಮುಂದ ಎಂಬಲ್ಲಿ ಹೊಳೆಗೆ ಸೇತುವೆ ನಿರ್ಮಾಣ

## 4. ಬೈಂದೂರು

ಯಡ್ತರೆ ಗ್ರಾಮ ಪಂಚಾಯತ್ ವ್ಯಾಪ್ತಿಯ
ಕಲ್ಯಂಕಿ - ಕುಂಜಳ್ಳಿ ರಸ್ತೆಯಲ್ಲಿ ಸೇತುವೆ ನಿರ್ಮಾಣ

## 5. ಬೈಂದೂರು

ಕಬ್ಬಿನಾಲೆ ಬೊಮ್ಮನಹಳ್ಳದಲ್ಲಿ
ಚಕ್ರಾ ನದಿಗೆ ಸೇತುವೆ ನಿರ್ಮಾಣ

## 6. ಬೈಂದೂರು

ಶಂಕರನಾರಾಯಣ ಗ್ರಾಮದ ಸೌಡ ಎಂಬಲ್ಲಿ
ವಾರಾಹಿ ನದಿಗೆ ಸೇತುವೆ ನಿರ್ಮಾಣ



## ಕಾಲುಸಂಕಗಳು

**ವಂಡ್ಸೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಉದ್ದಿನಬೆಟ್ಟು**

**ಆಮಾಸೆಬೈಲ್ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಚ್ಚಟ್ಟು ಗ್ರಾಮದ ಮಡಿವಾಳ ಕಟ್ಟು**

**ಗುಲ್ವಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಾವಿನಗುಳಿ ದೇವಕಿ ಮನೆ**

**ಕೆರಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಳ್ಳಂಬಳ್ಳಿ**

**ಕೆರಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೆಳ್ಳಾಲ ಮುಳ್‌ಹಕ್ಲು**





# ರಸ್ತೆ ಸಂಪರ್ಕದಲ್ಲಿ ನೂತನ ದಾಖಲೆ

ರಸ್ತೆಗಳು ಜನಸಂಪರ್ಕದ ಜೀವನಾಡಿಯಿದ್ದಂತೆ. ಕ್ಷೇತ್ರದ ಕಾಡಂಚಿನ ಹಾಗೂ ಕುಗ್ರಾಮಗಳ ಜನರು ನಗರಸಂಪರ್ಕ ಹೊಂದಲು ಹರಸಾಹಸ ಪಡಬೇಕಾಗಿತ್ತು.

ಗ್ರಾಮೀಣ ಜನತೆಯ ಈ ಸಮಸ್ಯೆಯ ನೈಜತೆಯನ್ನು ಅರಿತ ನಮ್ಮ ಸರ್ಕಾರ ಕಾಡಂಚಿನ ಗ್ರಾಮಗಳಿಗೆ ಹಾಗೂ ಕುಗ್ರಾಮಗಳಿಗೆ ರಸ್ತೆ ಸಂಪರ್ಕ ಕಲ್ಪಿಸುವ ಮಹತ್ವದ ಯೋಜನೆಯನ್ನು ಹಾಕಿಕೊಂಡು, ಆ ಮೂಲಕ ವಿದ್ಯಾರ್ಥಿಗಳಿಗೆ, ರೈತರಿಗೆ, ಕಾರ್ಮಿಕರಿಗೆ ಹಾಗೂ ಸಾರ್ವಜನಿಕರಿಗೆ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟಿದೆ.

## ಲೋಕೋಪಯೋಗಿ ಇಲಾಖೆ

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ 20 ಕೋಟಿ ರೂ ಮೊತ್ತದ ಹೆಮ್ಮಾಡಿ - ನೆಂಪು ರಸ್ತೆ ದ್ವಿಪಥ ಕಾಮಗಾರಿ ಪೂರ್ಣಗೊಂಡಿದೆ. ಶಂಕರನಾರಾಯಣದಿಂದ ನೆಂಪು ವರೆಗಿನ 23 ಕೋಟಿ ಮೊತ್ತದ ರಾಜ್ಯ ಹೆದ್ದಾರಿ ಅಗಲೀಕರಣ ಕಾಮಗಾರಿ ಪ್ರಗತಿಯಲ್ಲಿದೆ.

**ಪಿಎಂಜಿಎಸ್‌ವೈ**

ನಮ್ಮ ಗ್ರಾಮ-ನಮ್ಮ ರಸ್ತೆ ಯೋಜನೆಯಡಿ ಕಂಡ್ಲೂರು ಮುಖ್ಯರಸ್ತೆಯಿಂದ ವಾಲ್ತೂರು, ಯಡಮೊಗೆ ಅಜ್ಜಿಕಾನು ಹೊಸಬಾಳು, ಹಟ್ಟಿಯಂಗಡಿ ಜಾಡಿ ಸಂಪರ್ಕ ರಸ್ತೆ, ವಂಡ್ಸೆ - ನೂಜಾಡಿ - ಹಕ್ಲಾಡಿ ರಸ್ತೆ, ಮದ್ದೋಡಿ - ನಾಗರಮಕ್ಕಿ ರಸ್ತೆ, ಹೊಸಂಗಡಿ ಮಾವಿನಮನೆ ರಸ್ತೆ ಸೇರಿದಂತೆ ಹಲವು ರಸ್ತೆ ಕಾಮಗಾರಿಗಳನ್ನು ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕೈಗೊಳ್ಳಲಾಗಿದೆ.



## ಮೀನುಗಾರಿಕಾ ಕೊಂಡಿ ರಸ್ತೆ - 12 ಕೋಟಿ ರೂ

ಶಿರೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಆಳ್ವೆಗದ್ದೆ ಬಂದರು ರಸ್ತೆ, ಮಡಿಕಲ್ - ಕರ್ಕಿಕಳಿ ಮೀನುಗಾರಿಕಾ ರಸ್ತೆ, ಓಲಗ ಮಂಟಪ ಮೀನುಗಾರಿಕೆ ರಸ್ತೆ, ಮಡಿಕಲ್ ಆಳ್ವೆಕೋಡಿ ಶಾಲೆಬಾಗಿಲು ಮೀನುಗಾರಿಕೆ ರಸ್ತೆ ಸೇರಿದಂತೆ ಹಲವು ರಸ್ತೆ ಕಾಮಗಾರಿಗಳನ್ನು ನಡೆಸಲಾಗಿದೆ.

## ವರಾಹಿ ಯೋಜನೆ

ಹೇರೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಉಪ್ರಳ್ಳಿ ಕಾಳಿಕಾಂಬ ದೇವಸ್ಥಾನ ರಸ್ತೆ, ಹೇರಿಕೆರೆ ರಸ್ತೆ, ಯಡ್ತರೆ ಪತ್ತಿನಕಟ್ಟೆಯಿಂದ ವಿನಾಯಕ ಬಿಲ್ಲವ ಮನೆ ರಸ್ತೆ, ತಗ್ಗರ್ಸೆ ಕಂಬಳಗದ್ದೆ ರಸ್ತೆಯಿಂದ ಗುಡ್ಡೆಯಂಗಡಿ ಎಸ್‌ಸಿ ಕಾಲೋನಿ ರಸ್ತೆ, ಜಡ್ಕಲ್ ಬಸ್ರಿಬೇರು ರಸ್ತೆ ಇತ್ಯಾದಿ ರಸ್ತೆಗಳನ್ನು ವರಾಹಿ ಯೋಜನೆಯಡಿ ಅಭಿವೃದ್ಧಿ ಪಡಿಸಲಾಗಿದೆ.



## ಗ್ರಾಮೀಣ ಸಂಪರ್ಕ ರಸ್ತೆಗಳಿಗೆ 500 ಕೋಟಿ

ಮಾದುಕೋಡ್ಲು ರಸ್ತೆ ಮತ್ತು ಅಲ್ಸಾಡಿ ರಸ್ತೆ, ಕಬ್ಸೆ ರಸ್ತೆ, ಗುಜ್ಜಾಡಿ ಕೊಡಂಚ ರಸ್ತೆ, ಬೆಣ್ಗೇರಿ ಅಂಗನವಾಡಿ ರಸ್ತೆ, ಮೇಲಂಡಿ ಯಕ್ಷಿ ದೇವಸ್ಥಾನ ರಸ್ತೆ, ಬಂಟರ ಗರಡಿ ರಸ್ತೆ, ಚಿತ್ತೂರು ಮಂಗಳಮಕ್ಕಿ ರಸ್ತೆ ಇತ್ಯಾದಿ .

ಹಲವಾರು ದಶಕಗಳಿಂದ ಅಭಿವೃದ್ಧಿಯನ್ನೇ ಕಾಣದ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಪಣತೊಟ್ಟ ಶಾಸಕರು ವಿವಿಧ ಗ್ರಾಮಗಳಲ್ಲಿ ಅತಿ ಹೆಚ್ಚು ದುರಸ್ತಿಯಲ್ಲಿರುವ ರಸ್ತೆಗಳ ಅಭಿವೃದ್ಧಿಗೆ ಅನುದಾನ ಒದಗಿಸಿದ್ದಾರೆ. ನಮ್ಮ ಗ್ರಾಮ-ನಮ್ಮ ರಸ್ತೆ ಯೋಜನೆಯಡಿ 65.15 ಕೋಟಿ ಅನುದಾನ ಬಿಡುಗಡೆಯಾಗಿದ್ದು, 42 ಕೋಟಿ ರೂಪಾಯಿ ಮೊತ್ತದ ವಿವಿಧ ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿವೆ.

## ಸಮಾಜ ಕಲ್ಯಾಣ ಇಲಾಖೆ

ಸಿದ್ದಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಬುಕ್ಕಿಬಾಳಿ ರಸ್ತೆ, ಕೊಳೂರು ಕ್ರಾಸ್ ಬಳಿಯಿಂದ ಬಾರಂದಾಡಿ ಶಾಲೆ ರಸ್ತೆ, ಎಸ್‌ಸಿ ಕಾಲೊನಿ ರಸ್ತೆ, ಮೊವಾಡಿ ಶಾಲೆ ಹತ್ತಿರದಿಂದ ಎಸ್‌ಸಿ ಕಾಲೊನಿ ರಸ್ತೆ ಇತ್ಯಾದಿಗಳು.

## ಮಲೆನಾಡು ಅಭಿವೃದ್ಧಿ ಪ್ರಾಧಿಕಾರ

ಗಂಗೊಳ್ಳಿ ಬೇಲಿಕೆರೆ ರಸ್ತೆ, ಮಲ್ಯರ ಬೆಟ್ಟು ರಸ್ತೆ, ಹೇರಂಜಾಲು ತಿಮ್ಮಪ್ಪ ಗಾಣಿಗರ ಮನೆಗೆ ಹೋಗುವ ರಸ್ತೆ, ತಲ್ಲೂರು ಮಾರನಮನೆ ರಸ್ತೆ, ಹಳ್ನಾಡು ತುಳಸಿ ರಸ್ತೆ, ಹೆಮ್ಮಾಡಿ ಕಾಶಿಮಠ ರಸ್ತೆ, ಕೆಂಚನೂರು ಹೊಸಮಠ ರಸ್ತೆ ಸೇರಿದಂತೆ ವಿವಿಧ ರಸ್ತೆಗಳು.

# ಬಂದರು - ಮೀನುಗಾರಿಕಾ ಅಭಿವೃದ್ಧಿಯ ಹೊಸಪರ್ವ

ಬೈಂದೂರು ಕ್ಷೇತ್ರದ ಮೀನುಗಾರಿಕೆಯ ಬೃಹತ್ ಕೊಂಡಿಯಾದ ಬಂದರು ಮತ್ತು ಮೀನುಗಾರಿಕೆ ಇಲಾಖೆಯ ಹಲವು ಯೋಜನೆಗಳಿಗೆ ಕಾಯಕಲ್ಪ ನೀಡಿದ ಶ್ರೇಯಸ್ಸು ಸುಕುಮಾರ ಶೆಟ್ಟಿ ಅವರಿಗೆ ಸಲ್ಲುತ್ತದೆ. ಮತ್ಸ್ಯೋದ್ಯಮ ಬೆಂಬಲಕ್ಕೆ ಮರವಂತೆ ಬ್ರೇಕ್ ವಾಟರ್ 2ನೇ ಹಂತದ ಕಾಮಗಾರಿಗೆ 85 ಕೋಟಿ ರೂಗಳ ಅನುದಾನ, ಗಂಗೊಳ್ಳಿ ಜೆಟ್ಟಿ ಪುನರ್ ನಿರ್ಮಾಣಕ್ಕೆ 12 ಕೋಟಿ ರೂಪಾಯಿ, ಗಂಗೊಳ್ಳಿ ಮೀನುಗಾರಿಕೆ ಬಂದರಿನಲ್ಲಿ ಜೆಟ್ಟಿ ಹಾಗೂ ಡಯಾಫ್ರಂ ಗೋಡೆ ಕಾಮಗಾರಿಗೆ 4 ಕೋಟಿ ರೂ, ಕೊಡೇರಿ ಬಂದರು ಅಭಿವೃದ್ಧಿಗೆ ಎರಡು ಕೋಟಿ ರೂಪಾಯಿ, ಕೊಡೇರಿ ನದಿ ದಂಡೆ ಸಂರಕ್ಷಣೆ ಮತ್ತು ನ್ಯಾವಿಗೇಶನ್ ಚಾನೆಲ್ ಕಾಮಗಾರಿಗೆ 2.8 ಕೋಟಿ ಸೇರಿದಂತೆ ಒಟ್ಟು 93.80 ಕೋಟಿ ರೂಪಾಯಿ ಅನುದಾನವನ್ನು ಸರ್ಕಾರದಿಂದ ನೀಡಲಾಗಿದೆ.



ಗಂಗೊಳ್ಳಿಯಲ್ಲಿ ಕೋಸ್ಟಲ್ ಬರ್ತ್ ನಿರ್ಮಾಣಕ್ಕೆ 95 ಕೋಟಿ, ಮೀನುಗಾರಿಕಾ ಕುಟುಂಬಗಳಿಗೆ 500ಕ್ಕೂ ಹೆಚ್ಚು ಮನೆಗಳನ್ನು ವಿತರಿಸಲಾಗಿದೆ. ಮೀನುಗಾರರ ಜೀವ ರಕ್ಷಣೆಗೋಸ್ಕರ ಶಾಸಕರ ಮುತುವರ್ಜಿಯಲ್ಲಿ ಹೆಚ್ಚುವರಿ ವಾಟರ್ ಜಾಕೆಟ್ ನೀಡಲಾಗಿದೆ.

ನಿಗದಿತ ಅವಧಿಯಲ್ಲಿ ಸೀಮೆಎಣ್ಣೆ ಪೂರೈಕೆ ವಿಳಂಬವಾದಾಗ ಮಾನ್ಯ ಸಂಸದರಾದ ಬಿ. ವೈ. ರಾಘವೇಂದ್ರ ಅವರ ಮುತುವರ್ಜಿಯಿಂದ ಶಾಸಕರಾದ ಬಿ. ಎಂ ಸುಕುಮಾರ ಶೆಟ್ಟರು ಬೆಳಗಾವಿ ವಿಧಾನಸಭಾ ಅಧಿವೇಶನದಲ್ಲಿ ಈ ಕುರಿತು ಪ್ರಶ್ನೆ ಮಾಡಿದ್ದರು. ಅವರ ಕಾಳಜಿಯಿಂದಾಗಿ ಹೆಚ್ಚುವರಿ ಸೀಮೆಎಣ್ಣೆ ಪೂರೈಕೆ ಮಾಡಲಾಗಿದೆ.

## ಮರವಂತೆ 2ನೇ ಹಂತದ ಕಾಮಗಾರಿ

ರಾಜ್ಯದ ಏಕೈಕ ಹೊರ ಬಂದರು ಎಂಬ ಹೆಗ್ಗಳಿಕೆಯ ಮರವಂತೆಯ ಮೀನುಗಾರಿಕಾ ಹೊರ ಬಂದರಿನ ಎರಡನೇ ಹಂತದ ಕಾಮಗಾರಿಗೆ 85 ಕೋಟಿ ರೂಪಾಯಿ ಅನುದಾನ ಬಿಡುಗಡೆಯಾಗಿದೆ. ಈ ಹಂತದ ಕಾಮಗಾರಿಯಿಂದಾಗಿ ಸಾವಿರಾರು ಮೀನುಗಾರರಿಗೆ ವರದಾನವಾಗಲಿದ್ದು, ದೋಣಿಗಳು ಮೀನುಗಾರಿಕೆ ಮುಗಿಸಿ ಬಂದರಿನೊಳಗೆ ಬರಲಿವೆ.

ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಮೀನುಗಾರಿಕಾ ಕೊಂಡಿ ರಸ್ತೆಗಳ ಅಭಿವೃದ್ಧಿಗೆ 12 ಕೋಟಿ ರೂಪಾಯಿ ಬಿಡುಗಡೆ ಮತ್ತು ನಾಲ್ಕು ಕೋಟಿ ಹೆಚ್ಚುವರಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಮೀನುಗಾರಿಕಾ ಕುಟುಂಬಗಳಿಗೆ ಇಲಾಖೆಯ ವತಿಯಿಂದ ಸುಮಾರು 500ಕ್ಕೂ ಹೆಚ್ಚು ಮೀನುಗಾರಿಕಾ ಮನೆಗಳನ್ನು ವಿತರಿಸಲಾಗಿದೆ.

2008-09ರ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ಬಿ. ಎಸ್ ಯಡಿಯೂರಪ್ಪನವರು ಮರವಂತೆ ಹೊರ ಬಂದರಿನ ಮೊದಲನೇ ಹಂತದ ಕಾಮಗಾರಿಗೆ ಅನುದಾನ ನೀಡಿದ್ದರು.

ಈಗ ಬಿಜೆಪಿ ಸರಕಾರ ಮತ್ತೆ ಎರಡನೇ ಹಂತದ ಅಭಿವೃದ್ಧಿ ಕಾಮಗಾರಿಗೆ ಅನುದಾನ ಒದಗಿಸಿದೆ. ಮೀನುಗಾರರ ಹಿತ ಕಾಯುವಲ್ಲಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅತ್ಯಂತ ಪ್ರಮುಖ ಪಾತ್ರ ವಹಿಸಿದೆ.

**ಕ್ಷೇತ್ರದ ಗಂಗೊಳ್ಳಿಗೆ ಮುಖ್ಯರಸ್ತೆಯೇ ಸಂಪರ್ಕ ರಸ್ತೆಯಾಗಿತ್ತು. ಇದನ್ನು ಮನಗಂಡು ಚುನಾವಣೆಯಲ್ಲಿ ನೀಡಿದ ಮಾತಿನಂತೆ ಗಂಗೊಳ್ಳಿಯಲ್ಲಿ ರಿಂಗ್‌ರೋಡ್ ನಿರ್ಮಾಣಕ್ಕೆ ಸಣ್ಣ ನೀರಾವರಿ ಇಲಾಖೆಯಿಂದ 10ಕೋಟಿ ರೂಪಾಯಿ ಅನುದಾನ ಮಂಜೂರಾಗಿ ಕೆಲಸ ಆರಂಭಗೊಂಡಿದೆ. ಈ ರಸ್ತೆ ನಿರ್ಮಾಣ ಸುಕುಮಾರ ಶೆಟ್ಟಿ ಅವರ ದೂರದೃಷ್ಟಿತ್ವ ಮತ್ತು ಮೀನುಗಾರರ ಬಗೆಗಿನ ಅತೀವ ಕಾಳಜಿಯಿಂದ ಆಗಿದ್ದು, ಅವರ ಶಾಸಕತ್ವದ ಬಹುದೊಡ್ಡ ಮೈಲಿಗಲ್ಲು ಮತ್ತು ಈ ಭಾಗದ ಜನರಿಗೆ ಶಾಶ್ವತ ಋಣ ಬಿ.ಎಂ. ಸುಕುಮಾರ ಶೆಟ್ಟರ ಮೇಲಿರಲಿದೆ ಎನ್ನುವುದು ಈ ಭಾಗದ ಜನರ ಅಭಿಪ್ರಾಯ.**





**4178**
**ಮನೆಗಳು**

> "ಅಭಿವೃದ್ಧಿಯೇ ಕಾಣದ, ಜೀರ್ಣೋದ್ಧಾರಗೊಳ್ಳದ, ಶಿಥಿಲಾವಸ್ಥೆಯಲ್ಲಿದ್ದ ಅನೇಕ ದೇವಾಲಯಗಳ ವಿಚಾರವನ್ನು ನೇರವಾಗಿ ಮುಖ್ಯಮಂತ್ರಿಗಳ ಕಾರ್ಯಕ್ರಮದಲ್ಲಿಯೇ ಹೇಳಿದವರು ಶಾಸಕ ಸುಕುಮಾರ ಶೆಟ್ಟಿ, ಬೈಂದೂರಿನಲ್ಲಿ ದೇವಾಲಯಗಳ ಅಭಿವೃದ್ಧಿ 10 ಪಟ್ಟು ಹೆಚ್ಚಾಗಿದೆ ಎಂದರೆ ಅದು ಸುಕುಮಾರ ಶೆಟ್ಟರ ಅವಧಿಯಲ್ಲಿ
>
> ■ ಉಮೇಶ್
> ವಂಡ್ಸೆ ಗ್ರಾಮ

# ಸಾವಿರಾರು ವಸತಿ ರಹಿತರಿಗೆ ಮನೆಗಳ ನಿರ್ಮಾಣ

ಕಳೆದ ಎರಡು ಮೂರು ವರ್ಷಗಳಿಂದ ವಸತಿ ನಿರ್ಮಾಣವಾಗದೆ ಫಲಾನುಭವಿಗಳು ಕಾಯುತ್ತಿದ್ದರು.
ಆ ಸಂದರ್ಭದಲ್ಲಿ 1,350 ಮನೆಗಳು ಎಲ್ಲ ಗ್ರಾಮ ಪಂಚಾಯತ್‌ಗಳಿಗೆ ಲಭಿಸಿದ್ದವು. ಆದರೆ ಅಷ್ಟು ಮನೆಗಳು ವಸತಿ ರಹಿತರಿಗೆ ಸಾಕಾಗದೆ ಹೋದಾಗ ಈ ವಿಚಾರವನ್ನು ಶಾಸಕರ ಗಮನಕ್ಕೆ ತಂದರು. ವಸತಿ ಮತ್ತು ಮೂಲಭೂತ ಸೌಕರ್ಯ ಸಚಿವರಾದ ಮಾನ್ಯ ಸೋಮಣ್ಣನವರು ಕೊಲ್ಲೂರಿಗೆ ಭೇಟಿ ನೀಡಿದಾಗ ಶಾಸಕರು ಅವರಲ್ಲಿ 2,000 ಮನೆಗಳಿಗೆ ಬೇಡಿಕೆ ಸಲ್ಲಿಸಿದರು. ಅತ್ಯಂತ ವೇಗವಾಗಿ ಈ ಮನೆಗಳು ಮಂಜೂರಾಗಿ, ಬೈಂದೂರಿನ ಗ್ರಾಮ ಪಂಚಾಯತ್‌ಗಳಿಗೆ 2,000 ಹೆಚ್ಚುವರಿ ಮನೆಗಳನ್ನು ಕೊಡಿಸಿದ ಸಾಧನೆ ಮಾನ್ಯ ಶಾಸಕರಾದ ಬಿ.ಎಂ. ಸುಕುಮಾರ ಶೆಟ್ಟಿಯವರದ್ದು. ಈ 2,000 ಮನೆಗಳು ಬಸವ ವಸತಿ ಯೋಜನೆಯಡಿ ಮಂಜೂರಾಗಿದೆ.

# ಧಾರ್ಮಿಕ ಕ್ಷೇತ್ರದಲ್ಲಿ ಛಾಪು ಮೂಡಿಸಿದ ಬಿಎಂಎಸ್

ಧಾರ್ಮಿಕವಾಗಿ ಅಪಾರ ದೈವಭಕ್ತರಾದ ಸುಕುಮಾರ ಶೆಟ್ಟರು ತಾನು ಮಾಡಿದಂತಹ ಎಲ್ಲಾ ಕಾರ್ಯಗಳು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಿಯೇ ತನ್ನಿಂದ ಮಾಡಿಸಿರುವುದಾಗಿ ನಂಬಿಕೊಂಡು ಬಂದಿದ್ದಾರೆ. ಅದರಂತೆ ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆಚ್ಚಿನ ದೇವಸ್ಥಾನಗಳು, ದೈವದ ಮನೆಗಳ ಸಮಗ್ರ ಅಭಿವೃದ್ಧಿಗೆ ಅನುದಾನ ಮಂಜೂರು ಮಾಡಿಸಿ ಸುಮಾರು 20 ಕೋಟಿ ಅನುದಾನ ನೀಡಿ ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ಕಳಶಪ್ರಾಯರಾಗಿದ್ದಾರೆ. ಅನ್ನದಾಸೋಹದಲ್ಲಿ ನಂಬಿಕೆ ಇಟ್ಟಿರುವ ಶಾಸಕರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಸೌಕೂರು, ಮರವಂತೆ ವರಾಹಸ್ವಾಮಿ ದೇವಸ್ಥಾನಗಳಲ್ಲಿ ಅನ್ನಸಂತರ್ಪಣೆ ಆರಂಭಿಸಲು ಕಾರಣೀಕರ್ತರಾಗಿದ್ದಾರೆ. ಉಪ್ಪುಂದ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಅನ್ನಸಂತರ್ಪಣೆ ಆಯೋಜಿಸುವ ಕುರಿತು ಚಿಂತನೆ ನಡೆಸಿದ್ದಾರೆ.

# ಗೋ ರಕ್ಷಣೆಗೆ ಬದ್ಧ

ಗೋ ಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೆ ತಂದು ರಾಜ್ಯ ಬಿಜೆಪಿ ಸರ್ಕಾರ ಈ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದೆ. ಜಿಲ್ಲೆಗೊಂದು ಗೋ ಶಾಲೆ ತೆರೆಯಬೇಕೆಂಬ ಆದೇಶವನ್ನು ಜಾರಿಗೊಳಿಸಿದೆ. ಆ ಮೂಲಕ ಗೋವುಗಳಿಗೆ ಸುರಕ್ಷಿತ ನೆಲೆ ಲಭಿಸುತ್ತದೆ. ಶಾಸಕರ ಮುತುವರ್ಜಿಯಿಂದ ಕೊಲ್ಲೂರು ಮೂಕಾಂಬಿಕಾ ದೇವಾಲಯದ ವತಿಯಿಂದ ಈಗಾಗಲೇ ಗೋಳಿಹೊಳೆ ಭಾಗದಲ್ಲಿ ಸರ್ವೆ ಕಾರ್ಯ ನಡೆಸಲಾಗಿದ್ದು, 50 ಲಕ್ಷ ರೂ. ಅನುದಾನ ಮೀಸಲಿಡಲಾಗಿದೆ.



# ಸರ್ವ ಸಮುದಾಯಗಳಿಗೂ ಮಾನ್ಯತೆ

ಬೈಂದೂರು ಕ್ಷೇತ್ರದಲ್ಲಿ ಮೂಲಭೂತ ಸೌಲಭ್ಯಗಳಿಂದ ವಂಚಿತರಾದ ಸಮುದಾಯಗಳ ಬೇಡಿಕೆ ಮತ್ತು ಅವಶ್ಯಕತೆಗಳಿಗೆ ಸ್ಪಂದಿಸಿ, ಅವರ ಆಶೋತ್ತರಗಳನ್ನು ಈಡೇರಿಸುವುದರೊಂದಿಗೆ ಸಾಂಸ್ಥಿಕ ಬೇಡಿಕೆಯನ್ನು ಈಡೇರಿಸಲು ಕೊಠಾರಿ, ದೇವಾಡಿಗ, ಕುಲಾಲ, ಪರಿಶಿಷ್ಟ ಪಂಗಡ, ಕೊಂಕಣ ಖಾರ್ವಿ, ಮೇಸ್ತಾ ಸಮಾಜ ಸೇರಿದಂತೆ ವಿವಿಧ ಸಮುದಾಯ ಭವನಗಳನ್ನು ನಿರ್ಮಾಣ ಮಾಡಿಕೊಟ್ಟ ಸಾರ್ಥಕತೆ ಶಾಸಕ ಸುಕುಮಾರ ಶೆಟ್ಟರದ್ದು. ಅದರಲ್ಲೂ ವಿಶೇಷವಾಗಿ ಸಮಾಜದ ಮುಖ್ಯ ವಾಹಿನಿಗಳಲ್ಲಿ ಗುರುತಿಸಿಕೊಳ್ಳದೆ ಇರುವ ಸಮುದಾಯಗಳಿಗೆ ಸಮುದಾಯ ಭವನವನ್ನು ನಿರ್ಮಿಸುವುದರ ಜೊತೆಗೆ ಅವರ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಭಾವನೆಗೆ ಸ್ಪಂದಿಸುವ ಕಾರ್ಯ ಬಿಜೆಪಿ ಸರ್ಕಾರ ಮಾಡುತ್ತಾ ಬಂದಿದೆ.



**26.25 ಕೋಟಿ**



## ಪ್ರವಾಸೋದ್ಯಮಕ್ಕೆ ಒತ್ತು

ಪ್ರವಾಸೋದ್ಯಮಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ಪ್ರಸಿದ್ಧ ಪ್ರವಾಸಿ ತಾಣಗಳಾದ ಮರವಂತೆ ಹಾಗೂ ಸೋಮೇಶ್ವರ ಕಡಲಕಿನಾರೆಗಳ ಅಭಿವೃದ್ಧಿಗೆ 25 ಕೋಟಿ ರೂಪಾಯಿ ಅನುದಾನ ಬಿಡುಗಡೆಯಾಗಿದ್ದು, ಅಂತರಾಷ್ಟ್ರೀಯ ಮಟ್ಟದ ಪ್ರವಾಸಿ ತಾಣವಾಗಿ ರೂಪುಗೊಳ್ಳಲಿದೆ.

**25.40 ಕೋಟಿ**



# ತಾಲೂಕು ಕೇಂದ್ರ ಅಭಿವೃದ್ಧಿ




**ಬೈಂದೂರು ಮಿನಿ ವಿಧಾನಸೌಧ**

ಸರ್ವೇ ನಂಬರ್ 334/3 & 265/1ಎ1 ರ 2.22 ಎಕ್ರೆ ಜಾಗದಲ್ಲಿ 10 ಕೋಟಿ ಮೊತ್ತದಲ್ಲಿ 2920 ಚದರ ಮೀಟರ್ ವಿಸ್ತೀರ್ಣದ ಕಟ್ಟಡ ನಿರ್ಮಾಣ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.



ವಿಜಯ ಕರ್ನಾಟಕ Namma Karavali Mangalore Edition, 15.07.2021 Edited by: Mahesh Puttaje

## ಮಾದರಿ ತಾಲೂಕು ಕೇಂದ್ರವಾಗಿ ಬೈಂದೂರು



## ಬೋಳಂಬಳ್ಳಿ-ಕಂಬದಕೋಣೆಗೆ ದೊಡ್ಡ ಕೆಎಸ್‌ಆರ್‌ಟಿಸಿ ಬಸ್

ಬೈಂದೂರು ಹೊಸ ತಾಲೂಕಾಗಿ ಘೋಷಣೆಯಾದ ನಂತರ ಆಡಳಿತ ವ್ಯವಸ್ಥೆಯನ್ನು ಚುರುಕುಗೊಳಿಸಲು ನ್ಯಾಯಾಲಯ, ತಾಲೂಕು ಪಂಚಾಯತ್ ಕಚೇರಿ, ಆಹಾರ ಇಲಾಖೆ ಇತ್ಯಾದಿ ಅನೇಕ ಸರ್ಕಾರಿ ಕಚೇರಿಗಳನ್ನು ಆರಂಭಿಸಲಾಗಿದೆ.

ವರಾಹಿ ನದಿ ಮೂಲದಿಂದ ಪ್ರತಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ಮನೆಗೆ ಕುಡಿಯುವ ನೀರಿನ ಯೋಜನೆಗೆ 396 ಕೋಟಿ ಅನುದಾನ ಮಂಜೂರಾಗಿ ಟೆಂಡರ್ ಪ್ರಕ್ರಿಯೆಯಲ್ಲಿದ್ದು, ತುರ್ತು ಗ್ರಾಮ ಪಂಚಾಯತ್ವಾರು ಪೈಪ್ ಲೈನ್ ಜೋಡಣೆ ಮತ್ತು ಸ್ಥಳೀಯ ನೀರಿನ ಮೂಲಗಳಿಂದ ಮನೆಮನೆಗೆ ಕುಡಿಯುವ ನೀರಿನ ಯೋಜನೆಗೆ ಅನುದಾನ ಮಂಜೂರಾಗಿ ಗ್ರಾಮ ಪಂಚಾಯತ್ವಾರು ಡಿಪಿಆರ್ ತಯಾರಿ ಕಾರ್ಯ ಪ್ರಗತಿಯಲ್ಲಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಜೊತೆ ನಿರಂತರ ಸಂಪರ್ಕದಲ್ಲಿದ್ದು ಸರ್ವೀಸ್ ರಸ್ತೆ ಮತ್ತು ರಾಷ್ಟ್ರೀಯ ಹೆದ್ದಾರಿ ಇಕ್ಕೆಲಗಳಲ್ಲಿ ಬೀದಿ ದೀಪ ಅಳವಡಿಸಿ, ಅಪಘಾತ ತಡೆಗೆ ಸೂಕ್ತ ಕ್ರಮ ವಹಿಸಿದ್ದು ಸಾರ್ವಜನಿಕರ ಮೆಚ್ಚುಗೆ ಗಳಿಸಿದೆ.



## ಎಲ್.ಇ.ಡಿ. ಬೀದಿದೀಪ ಉದ್ಘಾಟನೆ

ಬೈಂದೂರು ಕೆಎಸ್‌ಆರ್‌ಟಿಸಿ ಸರಕಾರಿ ಬಸ್ ನಿಲ್ದಾಣ ಕಾಮಗಾರಿಯು 5.11 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು, ಸೆಪ್ಟೆಂಬರ್ ನಲ್ಲಿ ಉದ್ಘಾಟನೆಗೊಳ್ಳಲಿದೆ.

ಅಗ್ನಿಶಾಮಕದಳ ಕಟ್ಟಡ ನಿರ್ಮಾಣಕ್ಕೆ 9 ಕೋಟಿ ಅನುದಾನ ಒದಗಿಸಲಾಗಿದ್ದು ಮುಂದಿನ ದಿನದಲ್ಲಿ ಸುಸಜ್ಜಿತ ಕಟ್ಟಡದಲ್ಲಿ ಕಾರ್ಯನಿರ್ವಹಿಸಲಿದೆ.

ನ್ಯಾಯಾಂಗ ಇಲಾಖೆ ಹೊಸ ತಾಲೂಕಿನಲ್ಲಿ ನೂತನ ನ್ಯಾಯಾಲಯ ನಿರ್ಮಾಣ ಆರಂಭಿಸಲಾಗಿದ್ದು, ಪ್ರಸ್ತುತ ತಾತ್ಕಾಲಿಕ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ.



**ಬೈಂದೂರು ಪಟ್ಟಣ ಪಂಚಾಯತ್ ಆಗಿ ಮೇಲ್ದರ್ಜೆಗೆ**

ಬೈಂದೂರು ಗ್ರಾಮ ಪಂಚಾಯತ್, ಯಡ್ತರೆ ಗ್ರಾಮ ಪಂಚಾಯತ್ ಹಾಗೂ ಪಡುವರಿ ಗ್ರಾಮ ಪಂಚಾಯತ್ ಅನ್ನು ಒಳಗೊಂಡು ಪಟ್ಟಣ ಪಂಚಾಯತ್ ರಚಿಸಲಾಗಿದೆ. ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾರ್ಯಗಳು ಚಾಲನೆಯಲ್ಲಿವೆ.

# ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಅಪಾರ ಅಭಿವೃದ್ಧಿ

ಬೈಂದೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಲವಾರು ನದಿಗಳು ಹರಿಯುತ್ತಿದ್ದು, ಚುನಾವಣೆಯ ಸಂದರ್ಭದಲ್ಲಿ ಘೋಷಿಸಿದಂತೆ ಎಲ್ಲಾ ನದಿಗಳಿಗೂ ಕಿಂಡಿ ಅಣೆಕಟ್ಟು ನಿರ್ಮಾಣ ಮಾಡಿ, ಅಂತರ್ಜಲ ಮಟ್ಟ ಹೆಚ್ಚಿಸಿ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಿಂಡಿ ಅಣೆಕಟ್ಟುಗಳ ನಿರ್ಮಾಣದ ಜೊತೆಗೆ ಸಂಪರ್ಕ ಮತ್ತು ವಾಹನ ಸಂಚಾರಕ್ಕೂ ಅವಕಾಶ ಒದಗಿಸಿ, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲಾಗಿದೆ.





**183.12 ಕೋಟಿ**

ಸುಮನಾವತಿ ನದಿಗೆ ಸುಬ್ಬರಡಿಯಲ್ಲಿ 35 ಕೋಟಿ ರೂ.ಪಶ್ಚಿಮ ವಾಹಿನಿ ಯೋಜನೆ ಅಡಿಯಲ್ಲಿ ಚಕ್ರಾ, ಸೌಪರ್ಣಿಕ, ಯಡಮಾವಿನ ಹೊಳೆಗಳಿಗೆ ಸುಮಾರು 132 ಕೋಟಿ ಹಾಗೂ ಎಸ್ಸಿಪಿ ಟಿಎಸ್ಪಿ ಯೋಜನೆ ಅಡಿ 10 ಕೋಟಿ ಸೇರಿದಂತೆ ಒಟ್ಟು 142 ಕೋಟಿ ಮೊತ್ತದ ವಿವಿಧ ಬಹುಪಯೋಗಿ ಅಗತ್ಯ ಕಿಂಡಿ ಅಣೆಕಟ್ಟುಗಳಿಗೆ ಅನುದಾನ ಬಿಡುಗಡೆಯಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಇವುಗಳಲ್ಲಿ ಆಲೂರು ಹುಂತನಗುಳಿ, ವಂಡ್ಸೆ, ಬಾಳಿಕೆರೆ, ಕಮಲಶಿಲೆ ಇಸ್ರುಬೇರು, ಆಜ್ರಿ, ಜೆಡ್ಡಿನಮುಲ್ಲಿ, ಗುಲ್ವಾಡಿ, ನೀರ್‌ಕೊಡ್ಲು, ಬಿಜ್ರಿ, ಶಿರೂರು ಕೋಟೆಮನೆ ಪ್ರಮುಖವಾದವು.

ಕೃಷಿ ಭೂಮಿಗೆ ಉಪ್ಪುನೀರು ನುಗ್ಗದಂತೆ ಹೆಮ್ಮಾಡಿ ಜಾಲಾಡಿ ಭಾಗದಲ್ಲಿ ರೂ 1 ಕೋಟಿ ಅನುದಾನ, ತಲ್ಲೂರು ಗ್ರಾಮದ ರಾಜಾಡಿ ಮಾರನಮನೆ ಭಾಗಗಳಲ್ಲಿ 5.60 ಕೋಟಿ ಅನುದಾನ ಸೇರಿದಂತೆ ಒಟ್ಟು 34.00 ಕೋಟಿಗಳ ವಿವಿಧ ನದಿದಂಡೆ ಸಂರಕ್ಷಣಾ ಕಾಮಗಾರಿ ಮತ್ತು ಕೆರೆ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕುಟುಂಬಗಳಿಗೆ ಕೃಷಿ ಚಟುವಟಿಕೆಗಳ ಅನುಕೂಲಕ್ಕಾಗಿ ಸುಮಾರು 26 ಬಾವಿಗಳ ನಿರ್ಮಾಣ.ತಲ್ಲೂರು, ಕಿರಿಮಂಜೇಶ್ವರ ಭಾಗಗಳಲ್ಲಿ ಕಾರ್ಲ್ಯಾಂಡ್ ಯೋಜನೆ ಅಡಿ 6 ಕೋಟಿ ಮೊತ್ತದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.



# ಪ್ರಾಕೃತಿಕ ವಿಕೋಪ





**ಮಾದರಿ ಶಾಸಕರಾಗಿ ಕಾರ್ಯನಿರ್ವಹಿಸಿರುವ ಸುಕುಮಾರ ಶೆಟ್ಟರು ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲೂ ಮನೆ ಮನೆಗೆ ತೆರಳಿ ಜನರಿಗೆ ಅಗತ್ಯವಿರುವ ಆಹಾರ ಕಿಟ್ ಹಾಗೂ ವೈದ್ಯಕೀಯ ನೆರವನ್ನು ಸರ್ಕಾರದ ವತಿಯಿಂದ ಹಾಗೂ ವೈಯಕ್ತಿಕ ನೆಲೆಯಿಂದ ಒದಗಿಸಿದ್ದಾರೆ. ಅವರ ಸೇವೆಯನ್ನು ಬೈಂದೂರಿನ ಜನತೆ ಮೆಚ್ಚಿದ್ದಾರೆ.**



ಕೊರೊನಾ ಹರಡದಂತೆ ಅಧಿಕಾರಿಗಳು ಕಟ್ಟೆಚ್ಚರ ವಹಿಸಬೇಕು: ಸುಕುಮಾರ್ ಶೆಟ್ಟಿ

ಲಾಕ್-ಡೌನ್ ಎದುರಾದ ಸಂದರ್ಭದಲ್ಲಿ ಹೊರ ಪ್ರದೇಶಗಳಲ್ಲಿ ಜೀವನ ರೂಪಿಸಿಕೊಳ್ಳಲು ತೆರಳಿದ್ದ ಅನೇಕ ಜನರು ಊರಿಗೆ ಬಂದಾಗ ಸುಸಜ್ಜಿತ ಕ್ವಾರಂಟೈನ್ ವ್ಯವಸ್ಥೆಯನ್ನು ಒದಗಿಸಲಾಯಿತು.

## ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಪಲ್ಸ್ ಅಕ್ಸಿಮೀಟರ್ ಕೊಡುಗೆ

ಕೋವಿಡ್ ಮಹಾಮಾರಿಯನ್ನು ನಿಯಂತ್ರಿಸುವಲ್ಲಿ ಜನರಿಗೆ ಸಹಕಾರಿಯಾಗಬಲ್ಲ ಪಲ್ಸ್ ಆಕ್ಸಿಮೀಟರ್ ಸಲಕರಣೆಯನ್ನು ಕುಂದಾಪುರ ತಾಲೂಕಿನ ರೋಟರಿ ವಲಯ 1ರ ಅಡಿಯಲ್ಲಿ ಬರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವಿತರಿಸಲಾಯಿತು.



ಇದಕ್ಕೆ ಪೂರ್ವಭಾವಿಯಾಗಿ ಕುಂದಾಪುರ ತಾಲೂಕು ಆಸ್ಪತ್ರೆಯಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ರೋಟರಿ ಮಾಜಿ ಜಿಲ್ಲಾ ಗವರ್ನರ್ ಅಭಿನಂದನ್ ಶೆಟ್ಟಿಯವರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬೇಕಾಗುವ ಪಲ್ಸ್ ಆಕ್ಸಿಮೀಟರ್‌ಗಳನ್ನು ತಾಲೂಕು ಆರೋಗ್ಯ ಅಧಿಕಾರಿ ಡಾ।ನಾಗಭೂಷಣ ಉಡುಪರಿಗೆ ಹಸ್ತಾಂತರಿಸಲಾಯಿತು.

ಇದಕ್ಕೆ ಸಂಬಂಧಿಸಿದಂತೆ ಕುಂದಾಪುರ ರೋಟರಿ ದಕ್ಷಿಣದ ಮಾಜಿ ಅಧ್ಯಕ್ಷರಾದ ಗಿಳಿಯಾರು ಶ್ರೀಧರ ಶೆಟ್ಟಿಯವರು 7 ಪಲ್ಸ್ ಆಕ್ಸಿಮೀಟರ್‌ನ್ನು ವಂಡ್ಸೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ। ಸನ್ಮಾನ್ ಶೆಟ್ಟಿಯವರಿಗೆ ಬೈಂದೂರು ಕ್ಷೇತ್ರದ ಶಾಸಕ ಬಿ.ಎಂ.ಸುಕುಮಾರ ಶೆಟ್ಟಿ ಅವರ ಸಮ್ಮುಖದಲ್ಲಿ ಹಸ್ತಾಂತರಿಸಿದರು.



ಆಶಾ ಕಾರ್ಯಕರ್ತೆಯರು ಸ್ವಸ್ಥ ಸಮಾಜ ನಿರ್ಮಾಣದ ಭದ್ರ ಬುನಾದಿ: ಶಾಸಕ ಸುಕುಮಾರ್ ಶೆಟ್ಟಿ

**ಬೈಂದೂರು ಕ್ಷೇತ್ರದ ಕಿರಿಮಂಜೇಶ್ವರ, ಆದ್ರಗೋಳಿ, ಮರವಂತೆ, ಕಂಚುಗೋಡು, ಭಗತ್ ನಗರ, ಗಂಗೊಳ್ಳಿ ಭಾಗದಲ್ಲಿ ಕಳೆದ ನಾಲ್ಕು ವರ್ಷಗಳಿಂದ ರಸ್ತೆ, ಮೀನುಗಾರರ ಆಸ್ತಿ ಪಾಸ್ತಿ ಸಮುದ್ರ ಪಾಲಾದಾಗ ತುರ್ತು ಕಾರ್ಯಾಚರಣೆ ನಡೆಸಿ, ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಮಾನ್ಯ ಕಂದಾಯ ಸಚಿವರಾದ ಆರ್. ಅಶೋಕ್, ಮಾನ್ಯ ಸಂಸದರಾದ ಬಿ. ವೈ. ರಾಘವೇಂದ್ರ ಅವರನ್ನು ಕರೆಸಿ, ಜನತೆಗೆ ಜೀವ ಹಾನಿ ಉಂಟಾಗದಂತೆ ತುರ್ತು ಕಾರ್ಯಾಚರಣೆ ಕೈಗೊಂಡು ಸಾರ್ವಜನಿಕರ ಶ್ಲಾಘನೆಗೆ ಪಾತ್ರರಾಗಿದ್ದಾರೆ.**

## ಕಡಲ್ಕೊರೆತ ಪ್ರದೇಶಕ್ಕೆ ಶಾಸಕ ಭೇಟಿ



**ವಿಕ ಸುದ್ದಿಲೋಕ** ಕುಂದಾಪುರ

ಕಡಲ್ಕೊರೆತದಿಂದ ಹಾನಿಗೊಂಡಿರುವ ಗುಜ್ಜಾಡಿ ಗ್ರಾಮದ ಕಂಚುಗೋಡು ಸನ್ಯಾಸಿಬಲೆ ಎಂಬಲ್ಲಿಗೆ ಗುರುವಾರ ಬೈಂದೂರು ಶಾಸಕ ಬಿ.ಎಂ.ಸುಕುಮಾರ ಶೆಟ್ಟಿ ಭೇಟಿ ನೀಡಿ ಹಾನಿ ಪರಿಶೀಲಿಸಿದರು. ಈ ಸಂದರ್ಭ ಸ್ಥಳದಲ್ಲಿದ್ದ ಬಂದರು ಮತ್ತು ಮೀನುಗಾರಿಕೆ ಇಲಾಖಾಧಿಕಾರಿಗಳಿಗೆ ತಡೆಗೋಡೆ ನಿರ್ಮಿಸಲು ಸೂಕ್ತ ಪ್ರಸ್ತಾವನೆ ಸಿದ್ಧಪಡಿಸಿ, ಕಾಮಗಾರಿ ಆರಂಭಿಸುವಂತೆ ಸೂಚಿಸಿದರು.

ಬಂದರು ಮತ್ತು ಮೀನುಗಾರಿಕೆ ಇಲಾಖೆಯ ಎಕ್ಸಿಕ್ಯೂಟಿವ್ ಎಂಜಿನಿಯರ್ ಮಂಜೇಗೌಡ, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಉದಯಕುಮಾರ್, ಬಂದರು ಇಲಾಖೆ ಇಂಜಿನಿಯರ್ ವಿಜಯ ಶೆಟ್ಟಿ, ತಾ.ಪಂ. ಸದಸ್ಯ ನಾರಾಯಣ ಕೆ.ಗುಜ್ಜಾಡಿ, ಗುಜ್ಜಾಡಿ ಗ್ರಾ.ಪಂ. ಮಾಜಿ ಅಧ್ಯಕ್ಷ ಹರೀಶ ಮೇಸ್ತ, ಸದಸ್ಯರಾದ ದೇವದಾಸ ಖಾರ್ವಿ, ಜನಾರ್ದನ ಪೂಜಾರಿ, ಬಿಜೆಪಿ ಮುಖಂಡ ಉಮೇಶ ಮೇಸ್ತ, ಸ್ಥಳೀಯ ಮೀನುಗಾರ ಮುಖಂಡರು ಮತ್ತಿತರರು ಉಪಸ್ಥಿತರಿದ್ದರು.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ವೈಯಕ್ತಿಕ ನೆಲೆಯಿಂದ ಮಾಸ್ಕ್, ಗ್ಲವ್ಸ್, ಪಿಪಿಇ ಕಿಟ್ ಗಳನ್ನು ಒದಗಿಸಿದ್ದಾರೆ. ಬೈಂದೂರಿನಲ್ಲಿ ಆಮ್ಲಜನಕ ಘಟಕದ ನಿರ್ಮಾಣಕ್ಕಾಗಿ ಶಾಸಕರ ಅನುದಾನದಿಂದ ಐದು ಲಕ್ಷ ರೂಪಾಯಿ ಒದಗಿಸಲಾಗಿದೆ.



ಅತಿವೃಷ್ಟಿಯಿಂದ ಜನಜೀವನ ಅಸ್ತವ್ಯಸ್ತಗೊಂಡಿದ್ದ ನಾವುಂದದ ಸಾಲ್ಬುಡ, ಬಡಾಕೆರೆ, ಸೇನಾಪುರ ಸೇರಿದಂತೆ ಇತರ ಪ್ರದೇಶಗಳಿಗೆ ಅಧಿಕಾರಿಗಳ ಜೊತೆ ಭೇಟಿ ನೀಡಿ ಜನಸಂಚಾರಕ್ಕೆ ಅಗತ್ಯವಿದ್ದ ಬೋಟ್ ವ್ಯವಸ್ಥೆ ಮಾಡಿ, ವೈಯಕ್ತಿಕ ನೆಲೆಯಿಂದಲೂ ದಿನಸಿ ಕಿಟ್ ಗಳನ್ನು ಶಾಸಕರು ಒದಗಿಸಿದ್ದಾರೆ. ಅತಿವೃಷ್ಟಿಯಿಂದ ಪೀಡಿತರಾದ ಜನರಿಗೆ ಸೂಕ್ತ ಪರಿಹಾರ ಒದಗಿಸಲು ನೆರವಾಗಿದ್ದಾರೆ.

# ಶೈಕ್ಷಣಿಕ ಕ್ರಾಂತಿಗೆ ಮುನ್ನುಡಿ

ಅಕ್ಷರ ಕ್ರಾಂತಿಯ ಹರಿಕಾರರಾದ ಬಿ. ಎಂ ಸುಕುಮಾರ ಶೆಟ್ಟರು ಸಮಾಜದ ಕಟ್ಟ ಕಡೆಯ ಮಗು ವಿದ್ಯಾವಂತನಾದರೆ ದೇಶ ಬದಲಾಗುತ್ತದೆ ಎನ್ನುವ ವಿಚಾರವನ್ನು ಬಲವಾಗಿ ನಂಬಿದವರು. ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಆಡಳಿತ ಮಂಡಳಿಯ ಧರ್ಮದರ್ಶಿಯಾಗಿರುವಾಗ ದೇವಸ್ಥಾನದ ವತಿಯಿಂದ ವಿವಿಧ ಶಾಲೆಗಳಲ್ಲಿ ಅನ್ನದಾಸೋಹ ನಡೆಸಿ, ಅಕ್ಷರ ದಾಸೋಹ ಯೋಜನೆಗೆ ಮುನ್ನುಡಿ ಬರೆದಿದ್ದಾರೆ. ನೆಂಪು ಕರ್ನಾಟಕ ಪಬ್ಲಿಕ್ ಸ್ಕೂಲ್ ಕಟ್ಟಡ, ಶಂಕರನಾರಾಯಣ ಪದವಿ ಕಾಲೇಜು, ಹೊಸಂಗಡಿ ಪದವಿ ಪೂರ್ವ ಕಾಲೇಜು, ನಾವುಂದ ಪದವಿಪೂರ್ವ ಕಾಲೇಜುಗಳಿಗೆ ಹೊಸ ಕಟ್ಟಡಗಳ ನಿರ್ಮಾಣ ಸೇರಿದಂತೆ ಸುಮಾರು 60ಕ್ಕೂ ಹೆಚ್ಚು ಪ್ರಾಥಮಿಕ ಪ್ರೌಢಶಾಲೆ ಕಟ್ಟಡಕ್ಕೆ ಅನುದಾನ ನೀಡಿದ್ದು ಆಜ್ರಿ, ಕೊಡ್ಲಾಡಿ, ಕಮಲಶಿಲೆ, ಯಡಮೊಗೆ, ಸಿದ್ದಾಪುರ, ಅಂಪಾರು, ನೇರಳಕಟ್ಟೆ ಪರಿಸರದ ಗ್ರಾಮೀಣ ವಿದ್ಯಾರ್ಥಿಗಳ ಅನುಕೂಲಕ್ಕಾಗಿ, ಅದರಲ್ಲೂ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಸಿದ್ದಾಪುರದಲ್ಲಿ ಹೊಸ ಪದವಿಪೂರ್ವ ಕಾಲೇಜಿಗೆ ಮಂಜೂರಾತಿ.





95.69 ಕೋಟಿ





## ಸದನದಲ್ಲಿ ಬಿಎಂಎಸ್

ಶಾಸಕರ ಪ್ರಮುಖ ಕರ್ತವ್ಯವನ್ನು ಚಾಚು ತಪ್ಪದೆ ನಿರ್ವಹಿಸಿದ ಬಿಎಮ್ ಸುಕುಮಾರ ಶೆಟ್ಟರು ಎಲ್ಲ ವಿಧಾನಸಭಾ ಅಧಿವೇಶನಗಳಲ್ಲಿ ಭಾಗವಹಿಸಿ, ತಾನು ಪ್ರತಿನಿಧಿಸುತ್ತಿರುವ ವಿಧಾನಸಭಾ ಕ್ಷೇತ್ರದ ಜನಸಾಮಾನ್ಯರ ಸಮಸ್ಯೆಯನ್ನು ಅರಿತು, ಆ ಬಗ್ಗೆ ಶಾಸನಸಭೆಯಲ್ಲಿ ಪ್ರಸ್ತಾಪಿಸಿ, ಸಮಸ್ಯೆಗಳನ್ನು ನಿವಾರಣೆಗೆ ಪ್ರಯತ್ನಿಸಿದ್ದಾರೆ. 94 ಸಿ ಅರ್ಜಿ ನೀಡಲು ಕಾಲಾವಕಾಶ ಮುಂದುವರಿಸಿರುವುದು ಬೈಂದೂರು ಕ್ಷೇತ್ರದ ಐತಿಹಾಸಿಕ ಘಟನೆಯಾಗಿದೆ. 57 ಅರ್ಜಿ ಮರು ಪಡೆಯಲು, ಪಡಿತರ ಚೀಟಿ ವಿತರಣೆ, ವಿವಿಧ ಇಲಾಖೆಗಳಲ್ಲಿನ ಸಿಬ್ಬಂದಿ ಕೊರತೆ, ವಸತಿ ರಹಿತರಿಗೆ ವಸತಿ ನೀಡುವ ಬಗ್ಗೆ, ರಸ್ತೆಗಳ ಮರು ನಿರ್ಮಾಣ, ಆರ್.ಟಿ.ಓ ಕಚೇರಿ, ಮೀನುಗಾರರ ಸೀಮೆಎಣ್ಣೆ ಕೊರತೆ ಸೇರಿದಂತೆ ಕ್ಷೇತ್ರದ ಜನಸಾಮಾನ್ಯರ ಧ್ವನಿಯನ್ನು ವಿಧಾನಸೌಧದಲ್ಲಿ ಮೊಳಗಿಸಿದ್ದು ಮಾನ್ಯ ಬಿ.ಎಂ. ಸುಕುಮಾರ್ ಶೆಟ್ಟಿ.

# ಸಮಾಜ ಕಲ್ಯಾಣ

## ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ - 5 ಕೋಟಿ

**ಗಿರಿಜನ ಕುಟುಂಬಗಳ ವಸತಿ, ಕುಡಿಯುವ ನೀರು ಯೋಜನೆಗಳಿಗಾಗಿ 5 ಕೋಟಿ ರೂಪಾಯಿ ಅನುದಾನ. ಇಲಾಖೆಯ ಮೂಲಕ ಕೊರಗ ಸಮುದಾಯದವರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲು ಶ್ರಮವಹಿಸಲಾಗಿದೆ.**






▶ ನಿರ್ಮಾಣವಾಗಲಿದೆ 19 ಹೊಸ, ಕಳೆದ ಬಾರಿಯ 5 ಬಿಎಸ್‌ಎನ್‌ಎಲ್ ಟವರ್

**ಬೈಂದೂರು ಕ್ಷೇತ್ರ: 24 ಟವರ್ ಮಂಜೂರು**

ಸುದಿನ ವಿಶೇಷ

**ಆದಷ್ಟು ಬೇಗ ಆರಂಭ**

ಬೈಂದೂರು ಕ್ಷೇತ್ರದ ಗ್ರಾಮೀಣ ಭಾಗಗಳಲ್ಲಿ ಮಕ್ಕಳ ಶಿಕ್ಷಣ, ಆರೋಗ್ಯ, ಪಡಿತರ ಥಂಬ್ ಗಳಿಗೆಲ್ಲ ಜನ ತೊಂದರೆ ಅನುಭವಿಸುತ್ತಿರುವುದನ್ನು ಮನಗಂಡು, ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಿದ್ದೆ. ಈಗ ಒಟ್ಟು 24 ಟವರ್ ಮಂಜೂರಾಗಿದೆ. ಇನ್ನು ಕೆಲವೊಂದು ಕಡೆಗಳಿಗೆ ಬೇಡಿಕೆಯಿದ್ದು, ಮುಂದಿನ ದಿನಗಳಲ್ಲಿ ಅಲ್ಲಿಗೂ ಪ್ರಯತ್ನಿಸಲಾಗುವುದು. ಜಾಗ ಗುರುತಿಸುವಿಕೆ ಪ್ರಕ್ರಿಯೆ ಮುಗಿದ ತತ್‌ಕ್ಷಣ ನಿರ್ಮಾಣ ಕಾಮಗಾರಿ ಆರಂಭವಾಗಲಿದೆ.
-ಬಿ.ವೈ. ರಾಘವೇಂದ್ರ, ಸಂಸದರು

**ನೆಟ್‌ವರ್ಕ್ ಸಮಸ್ಯೆಗೆ ಮುಕ್ತಿ**

**ಜಾಗ ಗುರುತಿಸುವಿಕೆ**

### ನೆಟ್ವರ್ಕ್ ಸಂಪರ್ಕ

ಉಡುಪಿ ಜಿಲ್ಲೆಯಲ್ಲಿ ಅತೀ ಹೆಚ್ಚು ಮೊಬೈಲ್ ನೆಟ್ವರ್ಕ್ ವಂಚಿತ ಊರುಗಳನ್ನು ಒಳಗೊಂಡಿರುವ ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಶಾಸಕರು ಹಾಗೂ ಸಂಸದರ ಪ್ರಯತ್ನದಿಂದಾಗಿ 5 ಹೊಸ ಬಿಎಸ್‌ಎನ್‌ಎಲ್ ಟವರ್ ಮಂಜೂರಾಗಿದೆ. ಯಡ್ತರೆ ಗ್ರಾಮದ ನಾಗರಮಕ್ಕಿ, ಬೈಂದೂರು ಗ್ರಾಮದ ಗಂಗನಾಡು, ಕಾಲ್ತೋಡು ಗ್ರಾಮದ ಬೋಳಂಬಳ್ಳಿ, ಹಳ್ಳಿಹೊಳೆ ಗ್ರಾಮದ ಇರಿಗೆ ಹಾಗೂ ಹೊಸೂರು ಗ್ರಾಮದ ಕುಕ್ಕುಡ ಪ್ರದೇಶದಲ್ಲಿ ಟವರ್ ನಿರ್ಮಾಣವಾಗಲಿದೆ.

### ಎಲ್ಲೂರು ವಿದ್ಯುತ್ ಉಪ ಕೇಂದ್ರ

ಮೆಸ್ಕಾಂ ನಿಯಮಿತದಿಂದ ಕೊಲ್ಲೂರು, ಗೋಳಿಹೊಳೆ ಸಮೀಪದ ಎಲ್ಲೂರಿನಲ್ಲಿ 14.5 ಕೋಟಿ ರೂಪಾಯಿ ವೆಚ್ಚದಲ್ಲಿ 33/11 ಕೆ ವಿ ಕೊಲ್ಲೂರು ವಿದ್ಯುತ್ ಉಪ ಕೇಂದ್ರ ಈಗಾಗಲೇ ಉದ್ಘಾಟನೆಗೊಂಡಿದೆ. ಈ ಕೇಂದ್ರದಿಂದ ಕಾಡಂಚಿನ ಪ್ರದೇಶಗಳಾದ ಯಳಜಿತ, ಗೋಳಿಹೊಳೆ, ಹಾಲ್ಕಲ್, ಕೊಲ್ಲೂರು, ಜಡ್ಕಲ್, ಇಡೂರು ಹಾಗೂ ಹೊಸೂರು ಪರಿಸರದ ಜನರಿಗೆ ಉಪಯೋಗವಾಗಲಿದೆ. ಕೃಷಿ ಉಪಯೋಗ ಮತ್ತು ಮನೆಗಳಿಗೂ ಇದು ವರದಾನವಾಗಲಿದ್ದು, ಈ ಯೋಜನೆಗಾಗಿ ಶಾಸಕರು ಅವಿರತವಾಗಿ ಶ್ರಮಿಸಿದ್ದಾರೆ.










# ಶಿಕ್ಷಣ ಪ್ರೇಮಿ ಬಿಎಂಎಸ್

**ಸಮಾಜದ ಕಟ್ಟ ಕಡೆಯ ಮಗು ವಿದ್ಯಾವಂತನಾದರೆ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ**



### ಗ್ರಾಮೀಣ ವಿದ್ಯಾರ್ಥಿಗಳ ಬದುಕಿಗೆ ಆಶಾಕಿರಣ

ಕೊಲ್ಲೂರು ದೇವಳದ ಆಡಳಿತ ಧರ್ಮದರ್ಶಿಗಳಾಗಿ ಗ್ರಾಮೀಣ ಪ್ರದೇಶಗಳಾದ ಹೆಮ್ಮಕ್ಕಿ, ಅರೆಶಿರೂರು, ಮಾವಿನಕಟ್ಟೆ, ಹೊಸೂರು, ಕೊಲ್ಲೂರು ಭಾಗಗಳಲ್ಲಿ ಪ್ರೌಢಶಾಲೆಗಳ ಜೊತೆಗೆ ಕೊಲ್ಲೂರಿನಲ್ಲಿ ಪದವಿ ಪೂರ್ವ ಕಾಲೇಜನ್ನು ಸ್ಥಾಪಿಸಿ ಸಹಸ್ರಾರು ವಿದ್ಯಾರ್ಥಿಗಳ ಬದುಕಿಗೆ ಬೆಳಕಾದವರು.





70 ಲಕ್ಷ ರೂ. ಫೀಸು ರಿಯಾಯಿತಿ ಮಾಡಿದ ಶಾಸಕ ಸುಕುಮಾರ ಶೆಟ್ಟಿ

**ಕೊರೊನಾ ಸಂಕಷ್ಟಕ್ಕಾಗಿ ಶೈಕ್ಷಣಿಕ ಶುಲ್ಕ ಕಡಿತ**

**ಗ್ರಾಮಾಂತರದ ಮಕ್ಕಳಿಗಾಗಿ**

ಗ್ರಾಮೀಣ ಭಾಗದ ಮಕ್ಕಳಿಗಾಗಿ ಇರುವ ಶಾಲೆ ಇದು. ಇಲ್ಲಿನ ಮಕ್ಕಳನ್ನು ಪ್ರತಿಭಾವಂತರನ್ನಾಗಿ ಮಾಡುವ ಗುರಿ ಇಟ್ಟುಕೊಂಡಿದ್ದೇವೆ. ಎಲ್ಲ ಮಕ್ಕಳಿಗೆ ಶಿಕ್ಷಣ ಕೊಡಿಸುವ ಅಗತ್ಯ ಇದೆ. ಆರ್ಥಿಕವಾಗಿ ಸಬಲರಾಗಿರುವವರು ಶುಲ್ಕದ ವಿಚಾರದಲ್ಲಿ ಚೌಕಾಸಿ ಮಾಡಬಾರದು. ಶುಲ್ಕ ಕಟ್ಟಲು ಹಣ ಇಲ್ಲ ಎಂದು ಮಕ್ಕಳ ಶಿಕ್ಷಣ ನಿಲ್ಲಿಸಬಾರದು.

ಬಿ.ಎಂ. ಸುಕುಮಾರ ಶೆಟ್ಟಿ
ಶಾಸಕರು, ಕುಂದಾಪುರ ಎಜುಕೇಶನ್ ಸೊಸೈಟಿ ಅಧ್ಯಕ್ಷರು

**ನೆರವು** **ಕೋವಿಡ್ ಸಂದರ್ಭ ಬಡ ವಿದ್ಯಾರ್ಥಿಗಳಿಗೆ 70 ಲಕ್ಷ ರೂಪಾಯಿ ಶುಲ್ಕ ವಿನಾಯಿತಿ**

### ಆಶ್ರಯದಾತ - ಹಸಿವು ನೀಗಿಸಿದವರು

1986 ರಿಂದ 1996 ರವರೆಗೆ ಸುಮಾರು 700 ವಿದ್ಯಾರ್ಥಿಗಳಿಗೆ ಹಾಸ್ಟೆಲ್ಲನ್ನು ತಮ್ಮ ಮನೆಯ ಪಕ್ಕದಲ್ಲಿ ಸ್ಥಾಪಿಸಿ ವಿದ್ಯಾರ್ಜನೆಗಾಗಿ ಉಚಿತ ಆಶ್ರಯ ನೀಡಿದವರು.ಕೊಲ್ಲೂರು ದೇವಳದ ಆಡಳಿತ ಧರ್ಮದರ್ಶಿಗಳಾಗಿ ದೇವಸ್ಥಾನದ ವತಿಯಿಂದ ಸುಮಾರು 26,000 ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಿ, ಅಕ್ಷರ ದಾಸೋಹದ ಕಲ್ಪನೆಗೆ ಮುನ್ನುಡಿ ಬರೆದವರು.



## ಕುಂದಾಪುರ ಎಜುಕೇಶನ್ ಸೊಸೈಟಿಯ ಅಧ್ಯಕ್ಷರು

ಅಧ್ಯಕ್ಷರಾಗಿ ಸಂಸ್ಥೆಗೆ ಹೊಸ ಕಾಯಕಲ್ಪ ನೀಡಿದವರು. ಎಚ್.ಎಮ್.ಎಮ್. ಹಾಗೂ ವಿ.ಕೆ.ಆರ್. ಆಚಾರ್ಯ ಆಂಗ್ಲ ಮಾಧ್ಯಮ ಶಾಲೆಯ ಅಧ್ಯಕ್ಷತೆ ವಹಿಸಿಕೊಂಡ ಆರಂಭದ ದಿನಗಳಲ್ಲೇ ಆರ್. ಎನ್.ಶೆಟ್ಟಿ ಪಿಯು ಕಾಲೇಜು ಮತ್ತು ಡಾ| ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸಿದವರು. ಆರಂಭದಲ್ಲಿ 600 ವಿದ್ಯಾರ್ಥಿಗಳಿದ್ದ ಸಂಸ್ಥೆಯಲ್ಲಿ ಪ್ರಸ್ತುತ 5000 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಮೂಲಕ ಕರಾವಳಿ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿಯ ಹರಿಕಾರರೆನಿಸಿದ್ದಾರೆ.

# ಧಾರ್ಮಿಕ ನೇತಾರ - ಆಧುನಿಕ ಕೊಲ್ಲೂರಿನ ಶಿಲ್ಪಿ










ಸ್ವಾಗತ ಗೋಪುರ



ಚಿನ್ನದ ರಥ



ಶ್ರೀ ಮೂಕಾಂಬಿಕಾ ಸಭಾ ಭವನ



ಶ್ರೀ ಮೂಕಾಂಬಿಕಾ ಸ್ವತಂತ್ರ ಪದವಿ ಪೂರ್ವ ಕಾಲೇಜು, ಕೊಲ್ಲೂರು



# ನಾಯಕನ ನೋಟ

ಕುಂದಾಪುರದ
ರೋಟರಾಕ್ಟ್
ಸ್ಥಾಪಕಾಧ್ಯಕ್ಷರು

ವಿದ್ಯಾರ್ಥಿ
ದೆಸೆಯಲ್ಲಿಯೇ
ಸಮಾಜಸೇವೆ



ಸತತ ಎರಡು ವರ್ಷ
ಭಂಡಾರ್ಕಾರ್ಸ್ ಪದವಿ
ಕಾಲೇಜಿನ ವಿದ್ಯಾರ್ಥಿ
ನಾಯಕರು



▲ ಕಾಲೇಜು ವಿದ್ಯಾರ್ಥಿ ಸಂಘದ
ಕಾರ್ಯ ಸಮಿತಿಯ ಪದಾಧಿಕಾರಿಗಳು



▲ ಕಾಲೇಜು ವಿದ್ಯಾರ್ಥಿ ಸಂಘದ ಆಡಳಿತ ಮಂಡಳಿ



▲ ಮಾಜಿ ಲೋಕಸಭೆಯ ಸ್ಪೀಕರ್
ಶ್ರೀ ಕೆ. ಎಸ್. ಹೆಗ್ಡೆಯವರಿಗೆ
ಕುಂದಾಪುರದಲ್ಲಿ ವಿದ್ಯಾರ್ಥಿ ಸಂಘದ ಅಧ್ಯಕ್ಷ
ಶ್ರೀ ಸುಕುಮಾರ ಶೆಟ್ಟಿಯವರಿಂದ ಸ್ವಾಗತ

# ನೇರ ನುಡಿ - ಸರಳ ಬದುಕು














## ಅಂತ್ಯೋದಯ – ನವ ಭಾರತ ಉದಯ

- ಜಮ್ಮು ಕಾಶ್ಮೀರಕ್ಕೆ ಅನ್ವಯವಾಗುವ **ಕಲಂ 370 ರದ್ದು.**
- **ಭಾರತದ ಆಧ್ಯಾತ್ಮಿಕ ಪುನರುಜ್ಜೀವನ:** ಶ್ರೀರಾಮಮಂದಿರಕ್ಕೆ ಶಿಲಾನ್ಯಾಸ, ಕಾಶಿ ವಿಶ್ವನಾಥ ಮತ್ತು ಉಜ್ಜಯಿನಿಯ ಮಹಾಕಾಲೇಶ್ವರ ಕಾರಿಡಾರ್‌ನ ಲೋಕಾರ್ಪಣೆ ಹಾಗೂ ಕೇದಾರನಾಥ, ಸೋಮನಾಥ ದೇವಾಲಯ ಪುನರಾಭಿವೃದ್ಧಿಗೆ ಶಿಲಾನ್ಯಾಸ.
- ವಿಶ್ವದ ಅತೀದೊಡ್ಡ **ಲಸಿಕಾ ಅಭಿಯಾನ,** ದೇಶದ 85 ಕೋಟಿಗೂ ಹೆಚ್ಚು ಜನರಿಗೆ ಉಚಿತ ಲಸಿಕೆ ನೀಡಿಕೆ.
- **ಭೇಟಿ ಪಡಾವೋ ಭೇಟಿ ಬಚಾವೋ** ಯೋಜನೆ ಜಾರಿ. **ಉಜ್ವಲಾ** ಯೋಜನೆಯ ಮೂಲಕ ಮಹಿಳೆಯರಿಗೆ ಹೊಗೆಯಿಂದ ಮುಕ್ತಿ.
- **ಪಂ. ದೀನದಯಾಳ ಗ್ರಾಮಜ್ಯೋತಿ** ಯೋಜನೆಯಡಿ 2.62 ಕೋಟಿ ಮನೆಗಳಿಗೆ ವಿದ್ಯುತ್.
- **ಆಯುಷ್ಮಾನ್ ಭಾರತ** ಯೋಜನೆಯಡಿ 50 ಕೋಟಿ ಬಡವರಿಗೆ ಸಹಾಯ, ಜನೌಷಧಿ ಕೇಂದ್ರಗಳಲ್ಲಿ ಶೇ. 50 ರಿಂದ ಶೇ 80ರವರೆಗೆ ಕಡಿಮೆ ದರದದಲ್ಲಿ ಔಷಧಿ.
- **ಭಯೋತ್ಪಾದನೆಗೆ ದಿಟ್ಟ ಉತ್ತರ:** ಸರ್ಜಿಕಲ್ ಸ್ಟ್ರೈಕ್, ವೈಮಾನಿಕ ದಾಳಿಯೊಂದಿಗೆ ಭಯೋತ್ಪಾದಕರ ಶಿಬಿರಗಳ ನಾಶ, ನಕ್ಸಲ್ ನಿಗ್ರಹ.
- ರಷ್ಯಾ – ಉಕ್ರೇನ್ ಯುದ್ಧ ಸಂದರ್ಭದಲ್ಲಿ **ಆಪರೇಷನ್ ಗಂಗಾ** ಮೂಲಕ 22,500 ಭಾರತೀಯರ ಸುರಕ್ಷಿತ ವಾಪಸಾತಿ.
- **ಸಾಮಾಜಿಕ ಸುರಕ್ಷೆ:** ಪ್ರತೀ ದಿನ ಕೇವಲ ಒಂದು ರೂ.ಗೆ 2 ಲಕ್ಷ ರೂಗಳ ಜೀವ ವಿಮಾ ಸುರಕ್ಷೆ, ಕೇವಲ ವಾರ್ಷಿಕ 20 ರೂ.ಗೆ 2 ಲಕ್ಷ ರೂಗಳ ಅಪಘಾತ ವಿಮೆ.
- **ರೈತ ಸ್ನೇಹಿ ಸುಧಾರಣೆಗಳು:** ಬೇವು ಲೇಪಿತ ಯೂರಿಯಾದ ವ್ಯವಸ್ಥೆ, ಫಸಲ್ ಭೀಮಾ ಯೋಜನೆ ನಿಯಮಗಳ ಮಾರ್ಪಾಡು, ಇ–ನಾಮ್ ಮಾರುಕಟ್ಟೆ ವ್ಯವಸ್ಥೆ, ಪಿಎಂ ಕಿಸಾನ್ ಯೋಜನೆಯಡಿ ರೈತರಿಗೆ ನೆರವು.
- **ಭಾರತ್ ಮಾಲಾ, ಸಾಗರ್ ಮಾಲಾ** ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಕ್ರಮ. 2.84 ಲಕ್ಷ ಕಿ.ಮೀ. ಗ್ರಾಮೀಣ ರಸ್ತೆಗಳ ಅಭಿವೃದ್ಧಿ.
- ಆತ್ಮನಿರ್ಭರ ಭಾರತದ ಪರಿಕಲ್ಪನೆಯೊಂದಿಗೆ ಅತಿ ವೇಗದ **'ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು'** ಕಾರ್ಯಾರಂಭ.
- ಕೋವಿಡ್ ಸಂದರ್ಭದಲ್ಲಿ ಪೋಷಕರನ್ನು ಕಳೆದುಕೊಂಡ ಮಕ್ಕಳಿಗಾಗಿ **ಪಿಎಂ ಕೇರ್ಸ್.**
- **ವಂದೇ ಭಾರತ್ ಮಿಷನ್** ಮೂಲಕ ವಿದೇಶದಲ್ಲಿ ಸಂಕಷ್ಟಕ್ಕೀಡಾದವರಿಗೆ ಸ್ಪಂದನೆ.
- **ಪೌರತ್ವ ತಿದ್ದುಪಡಿ ವಿಧೇಯಕ 2019 :** ಭಾರತದಲ್ಲಿ ನಿರಾಶ್ರಿತರಾಗಿ ಜೀವನ ನಡೆಸುತ್ತಿದ್ದ ಸಿಖ್, ಬೌದ್ಧ, ಜೈನ, ಪಾರ್ಸಿ ಹಾಗೂ ಕ್ರಿಶ್ಚಿಯನ್ ಜನಾಂಗಕ್ಕೆ ಪೌರತ್ವ ನೀಡುವ ವಿಧೇಯಕ ಅಂಗೀಕಾರ.

**ಸಶಕ್ತ ಬಿಜೆಪಿ – ಸದೃಢ ಭಾರತ**

## ನವ ಭಾರತಕ್ಕಾಗಿ ನವ ಕರ್ನಾಟಕ

### ಅಮೃತ ಮಹೋತ್ಸವದ ಅಮೃತ ಯೋಜನೆಗಳು

ಅಮೃತ ಗ್ರಾಮ ಪಂಚಾಯ್ತಿ, ಅಮೃತ ಗ್ರಾಮೀಣ ವಸತಿ, ಅಮೃತ ಆರೋಗ್ಯ ಮೂಲಸೌಕರ್ಯ ಉನ್ನತೀಕರಣ, ಅಮೃತ ನಿರ್ಮಲ ನಗರ, ಅಮೃತ ಶಾಲಾ ಸೌಲಭ್ಯ, ಅಮೃತ ಕೌಶಲ್ಯ ತರಬೇತಿ ಹಾಗೂ ಅಮೃತ ನಗರೋತ್ಥಾನ.

### ಶಿಕ್ಷಣ

- **ರಾಷ್ಟ್ರೀಯ ಶಿಕ್ಷಣ ನೀತಿ** ಅನುಷ್ಠಾನಗೊಳಿಸಿದ ಮೊದಲ ರಾಜ್ಯ.
- **1,240** ಉಪನ್ಯಾಸಕರು, **15,000** ಶಿಕ್ಷಕರ ನೇಮಕಾತಿ, ಅತಿಥಿ ಉಪನ್ಯಾಸಕರ ಗೌರವಧನ ಹೆಚ್ಚಳ.
- ರೈತ ಹಾಗೂ ನೇಕಾರರ ಮಕ್ಕಳಿಗೆ **ವಿದ್ಯಾನಿಧಿ** ಯೋಜನೆ.
- **4,000** ಅಂಗನವಾಡಿ ಸ್ಥಾಪನೆ, ಕಾರ್ಯಕರ್ತೆಯರಿಗೆ ವಿಶೇಷ ತರಬೇತಿ.
- ವಿದ್ಯಾರ್ಥಿನಿಯರಿಗೆ **ಓಬವ್ವ ಆತ್ಮರಕ್ಷಣಾ ತರಬೇತಿ.**

### ಗ್ರಾಮೀಣಾಭಿವೃದ್ಧಿ

- ಹಾಲು ಉತ್ಪಾದಕರ ಅನುಕೂಲಕ್ಕೆ **ಕ್ಷೀರಸಮೃದ್ಧಿ.**
- **"ಮನೆ ಮನೆಗೆ ಗಂಗೆ"** 22.85ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ.
- ಗ್ರಾಮ ಪಂಚಾಯ್ತಿ ಅಧ್ಯಕ್ಷರ, ಉಪಾಧ್ಯಕ್ಷರ, ಸದಸ್ಯರ ಗೌರವಧನ ಹೆಚ್ಚಳ.
- ಜಿಲ್ಲೆಗಳಲ್ಲಿ ನಾಗರಿಕ ಸೇವೆಗಳನ್ನು ಒದಗಿಸುವ **"ಗ್ರಾಮ ಒನ್"** ಯೋಜನೆ.

### ನೀರಾವರಿ

- ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಗೆ ಅಡ್ಡಲಾಗಿ **ಕಿಂಡಿ ಅಣೆಕಟ್ಟು.**
- ತುಮಕೂರು ಜಿಲ್ಲೆಯ ಕೆರೆಗಳಿಗೆ ಎತ್ತಿನ ಹೊಳೆ ಯೋಜನೆಯಡಿ ನೀರು ತುಂಬಿಸುವ ಯೋಜನೆಗೆ **256 ಕೋ.ರೂ.**
- **ಕಲ್ಯಾಣ ಕರ್ನಾಟಕ** ಅಭಿವೃದ್ಧಿ ಕಾರ್ಯಕ್ಕೆ **2,637.33 ಕೋ.ರೂ.** ವೆಚ್ಚ.
- ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕ ಭಾಗಕ್ಕೆ **5,701 ಕೋ.ರೂ.**
- **ಕಳಸಾ ಬಂಡೂರಿ ಯೋಜನೆ** – ಡಿಪಿಆರ್‌ಗೆ ಕೇಂದ್ರ ಆಯೋಗದಿಂದ ಒಪ್ಪಿಗೆ.

### ಸಾಂಸ್ಕೃತಿಕ ಪುನರುತ್ಥಾನ

- **ಒನಕೆ ಓಬವ್ವ, ಚೆನ್ನಮ್ಮ ಜಯಂತಿ ಆಚರಣೆ** – ಸಮಾಧಿಯ ನವೀಕರಣ.
- ಕರಾವಳಿಯ **ದೈವ ನರ್ತಕರಿಗೆ 2,000** ರೂ.ಗಳ ಮಾಸಿಕ **ಗೌರವಧನ.**
- **ಕರ್ನಾಟಕ ಭಾರತ್ ಗೌರವ್ ಕಾಶಿ ದರ್ಶನ ರೈಲು** ಯೋಜನೆ ಜಾರಿ. ರಾಜ್ಯದಿಂದ ಕಾಶಿ ಯಾತ್ರೆಗೆ ತೆರಳುವವರಿಗೆ ತಲಾ **5,000 ರೂ.** ಸಹಾಯಧನ
- **140 ಕೋ.ರೂ** ವೆಚ್ಚದಲ್ಲಿ **ಅಂಜನಾದ್ರಿ ಬೆಟ್ಟದ ಅಭಿವೃದ್ಧಿಗೆ** ಯೋಜನೆ.

### ಮೀಸಲಾತಿ

- ಪರಿಶಿಷ್ಟ ಜಾತಿಯವರಿಗೆ ಶೇ. 15 ರಿಂದ ಶೇ. 17ಕ್ಕೆ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ 3 ರಿಂದ ಶೇ 7ಕ್ಕೆ ಮೀಸಲಾತಿ ಹೆಚ್ಚಳ.
- ಒಕ್ಕಲಿಗ ಮತ್ತು ಪಂಚಮಸಾಲಿ ಸಮಾಜದ ಮೀಸಲು ಹೆಚ್ಚಳ ಮತ್ತು ಆರ್ಥಿಕ ದುರ್ಬಲ ವರ್ಗದವರಿಗೆ 10% ಮೀಸಲಾತಿ ಅಂತಹ ಐತಿಹಾಸಿಕ ನಿರ್ಧಾರ.

### ಆರ್ಥಿಕ ನೆರವು

- ವೃದ್ಧಾಪ್ಯ ವೇತನ **ರೂ. 1,000** ದಿಂದ **1,200ಕ್ಕೆ,** ವಿಧವಾ ವೇತನ **ರೂ. 600** ರಿಂದ **ರೂ. 800ಕ್ಕೆ,** ವೈಕಲ್ಯ ದಿವ್ಯಾಂಗರ ಮಾಸಾಶನ **ರೂ. 600** ರಿಂದ **ರೂ. 800ಕ್ಕೆ** ಏರಿಕೆ.
- ಗುತ್ತಿಗೆನೌಕರರಾಗಿದ್ದ **11,133 ಪೌರ ಕಾರ್ಮಿಕರ ಖಾಯಂ.**

### ಸಾಮಾಜಿಕ ಹಿತಾಸಕ್ತಿ

- **ಗೋಹತ್ಯಾನಿಷೇಧ ಕಾಯ್ದೆ** ಜಾರಿ.
- ಪ. ಜಾ. ಪ.ಪಂ. ದವರಿಗೆ **75 ಯೂನಿಟ್ ಉಚಿತ ವಿದ್ಯುತ್.**
- ನೇಕಾರ ಸಮ್ಮಾನ್ ನೆರವಿನ ಮೊತ್ತ **ರೂ.2,000** ದಿಂದ **ರೂ. 5,000.**
- 100 ಆಳ ಸಮುದ್ರ ಮೀನುಗಾರಿಕಾ ದೋಣಿಗಳಿಗೆ ನೆರವು ನೀಡುವ **"ಮತ್ಸ್ಯಸಿರಿ"** ಯೋಜನೆ.
- **ಭೂ ಪರಿವರ್ತನೆ ವಿಧೇಯಕಕ್ಕೆ** ತಿದ್ದುಪಡಿ, 30 ರಿಂದ 7 ದಿನಕ್ಕೆ ಇಳಿಕೆ.
- ಗ್ರಾಮೀಣ ಜನರ ಅನುಕೂಲಕ್ಕಾಗಿ **ಸಂಚಾರಿ ಪಶು ಆ್ಯಂಬ್ಯುಲೆನ್ಸ್.**
- ಶ್ರಮಿಕ ವರ್ಗದವರಿಗೆ 100 **ಹೈಟೆಕ್ ಸಂಚಾರಿ ಕ್ಲಿನಿಕ್.**
- ಬಡ ವರ್ಗದವರಿಗೆ ವೈದ್ಯಕೀಯ ಸೇವೆ ಒದಗಿಸಲು 438 **'ನಮ್ಮ ಕ್ಲಿನಿಕ್'.**

### ಮಹಾತ್ಮರಿಗೆ ಗೌರವ

- ವಿಕಾಸ ಸೌಧದ ಬಳಿ **"ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಭವನ"** ನಿರ್ಮಾಣಕ್ಕೆ ಅನುಮೋದನೆ.
- ಸ್ವಾತಂತ್ರ್ಯ ಹೋರಾಟಗಾರ ವೀರಾಗ್ರಣಿ **ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ** ಆಚರಣೆ.
- ಬೆಂಗಳೂರು ನಗರ ನಿರ್ಮಾತೃ ನಾಡಪ್ರಭು **ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ** ಲೋಕಾರ್ಪಣೆ.
- ಮಹಾತ್ಮರ ಜೀವನಾದರ್ಶಗಳನ್ನು ಪರಿಚಯಿಸಲು ಸರ್ಕಾರದಿಂದ **31 ಮಹಾತ್ಮರ ಜಯಂತಿ ಆಚರಣೆ** ಹಾಗೂ ವಿಶೇಷ ಅನುದಾನ ಬಿಡುಗಡೆ.

### ಕನ್ನಡ ವೈಭವ

- 'ಕನ್ನಡಕ್ಕಾಗಿ ನಾವು' ಅಭಿಯಾನದಡಿ **'ಮಾತಾಡ್ ಮಾತಾಡ್ ಕನ್ನಡ'** ಘೋಷವಾಕ್ಯದಲ್ಲಿ ಆಚರಿಸಲಾದ ಕನ್ನಡ ರಾಜ್ಯೋತ್ಸವ. ರಾಜ್ಯಾದ್ಯಂತ ಏಕ ಕಾಲದಲ್ಲಿ **'ಕೋಟಿ ಕಂಠ ಗಾಯನ'** ಐತಿಹಾಸಿಕ ಕಾರ್ಯಕ್ರಮ.
- **ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ** ಆನ್‌ಲೈನ್ ಅಲ್ಲಿ ಶಿಫಾರಸು, ಯಾವುದೇ ಲಾಬಿ ಇಲ್ಲದೆ **ಸಾಮಾನ್ಯರನ್ನೂ** ಅರಸಿ ಬಂದ **ಪ್ರಶಸ್ತಿ.**

ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ
ಬಿಜೆಪಿಯನ್ನು ಜಯಶಾಲಿಯಾಗಿಸಿ,
ಅಭಿವೃದ್ಧಿ ಪಥದಲ್ಲಿ ಕ್ಷೇತ್ರವನ್ನು ಮುನ್ನಡೆಸಲು
ನೀವು ಕಾರಣೀಕರ್ತರಾಗಿದ್ದೀರಿ.

ನಿಮ್ಮ ಮತ ಬೈಂದೂರಿನ ಹಿಂದುಳಿದ ಕ್ಷೇತ್ರ
ಎಂಬ ಹಣೆಪಟ್ಟಿ ತೊಡೆದುಹಾಕಲು ಅಗತ್ಯವಾಗಿದೆ.
ನಿಮ್ಮ ಸಹಕಾರ, ಸಹಾಯವನ್ನು
ಮತದ ರೂಪದಲ್ಲಿ ಮತ್ತೆ ಬಿಜೆಪಿಗೆ ನೀಡಿ,
ಅಭಿವೃದ್ಧಿ ಮುಂದುವರಿಸಿ ಎಂದು
ವಿನಂತಿಸುತ್ತೇನೆ.

ಮುಂದಿನ ಭರವಸೆಯೇ ಬಿಜೆಪಿ.

ನಿಮ್ಮವ

[ಬಿ.ಎಂ.ಸುಕುಮಾರ ಶೆಟ್ಟಿ]





ಅಭಿವೃದ್ಧಿ ಮೆಲಕು
**ವಿಡಿಯೋ** ವೀಕ್ಷಣೆಗೆ

ಸ್ಕ್ಯಾನ್ ಮಾಡಿ